# ಕುವೆಂಪು ವಿಶ್ವವಿದ್ಯಾಲಯ

**ದಿನಾಂಕ:16-02-2024 ರಂದು ಶುಕ್ರವಾರ ಪೂರ್ವಾಹ್ನ 11.00 ಗಂಟೆಗೆ "ಶತಮಾನೋತ್ಸವ ಭವನದ ಹೊಸ ಸಿಂಡಿಕೇಟ್ ಸಭಾಂಗಣ" ಇಲ್ಲಿ ನಡೆದ ವಿಶೇಷ ಸಿಂಡಿಕೇಟ್ ಸಭೆ"ಯ ನಡಾವಳಿಗಳು.**

**ಹಾಜರಾದ ಸದಸ್ಯರು:**

| | | |
|---|---|---|
| 1. | ಪ್ರೊ. ಎಸ್. ವೆಂಕಟೇಶ, ಕುಲಪತಿಗಳು (ಪ್ರಭಾರ) | ಅಧ್ಯಕ್ಷರು |
| 2. | ಶ್ರೀ ವಿಜಯ್‌ಕುಮಾರ್ ಹೆಚ್.ಬಿ. ಕೆ.ಎ.ಎಸ್., ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |
| 3. | ಪ್ರೊ. ಗೋಪಿನಾಥ್, ಎಸ್.ಎಂ., ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 4. | ಪ್ರೊ. ಎಸ್. ವೆಂಕಟೇಶ, ಡೀನರು, ವಾಣಿಜ್ಯ ನಿಕಾಯ | ಸದಸ್ಯರು |
| 5. | ಶ್ರೀ ಶಾಂತಕುಮಾರ್ ಜಿ.ಎಸ್. | ಸದಸ್ಯರು |
| 6. | ಶ್ರೀ ಶಶಿಧರ್ ಬಿ.ಎನ್. | ಸದಸ್ಯರು |
| 7. | ಪ್ರೊ. ಚಂದ್ರಶೇಖರ್ ಕೆ. | ಸದಸ್ಯರು |
| 8. | ಡಾ. ಸಣ್ಣಹನುಮಪ್ಪ ಜಿ, ಪ್ರಾಂಶುಪಾಲರು | ಸದಸ್ಯರು |
| 9. | ಡಾ. ಅನಂತ ಎಸ್, ಪ್ರಾಂಶುಪಾಲರು | ಸದಸ್ಯರು |

**ಗೈರುಹಾಜರಾದ ಸದಸ್ಯರು:**

| | | |
|---|---|---|
| 1. | ಡಾ. ವಿಷ್ಣುಮೂರ್ತಿ ಕೆ.ಎ, ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರ ಪ್ರತಿನಿಧಿ | ಸದಸ್ಯರು |
| 2. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 3. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 4. | ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 5. | ಆಯುಕ್ತರು, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು. | ಸದಸ್ಯರು |

**ಪೂರ್ವಾನುಮತಿಯೊಂದಿಗೆ ಗೈರು ಹಾಜರಾದ ಸದಸ್ಯರು:**

ಯಾರು ಇರುವುದಿಲ್ಲ.

**ಪ್ರಸ್ತಾವನೆ:** ಸಭೆಗೆ ಆಗಮಿಸಿದ ಸರ್ವರನ್ನೂ ಸ್ವಾಗತಿಸಿದ ಮಾನ್ಯ ಕುಲಪತಿಯವರು, ಕೆಲವು ತುರ್ತು ಶೈಕ್ಷಣಿಕ ಮತ್ತು ಆಡಳಿತಾತ್ಮಕ ವಿಷಯಗಳ ಕುರಿತು ನಿರ್ಣಯಗಳನ್ನು ತೆಗೆದುಕೊಳ್ಳುವ ಅಗತ್ಯವಿದ್ದುದ್ದರಿಂದ ಈ ವಿಶೇಷ ಸಿಂಡಿಕೇಟ್ ಸಭೆಯನ್ನು ಕರೆಯಲಾಗಿದೆ ಎಂದರು. ಮುಂದುವರೆದು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ-2000, ಪ್ರಕರಣ-28(ಎಫ್)ರನ್ವಯ ಸಿಂಡಿಕೇಟ್‌ಗೆ ನಾಮನಿರ್ದೇಶಿತ ಪ್ರಾಂಶುಪಾಲರುಗಳಾದ ಡಾ. ಸಣ್ಣಹನುಮಪ್ಪ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಾಗರ ಹಾಗೂ ಡಾ.ಅನಂತ, ಎಸ್., ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊಪ್ಪ ಇವರುಗಳನ್ನು ಹಾಗೂ ಕರ್ನಾಟಕ ಸರ್ಕಾರದಿಂದ ವಿಶ್ವವಿದ್ಯಾಲಯದ ಕುಲಸಚಿವ (ಆಡಳಿತ) ಹುದ್ದೆಗೆ ನೇಮಕಗೊಂಡ ಶ್ರೀ ವಿಜಯ್‌ಕುಮಾರ್, ಹೆಚ್.ಬಿ., ಕೆ.ಎ.ಎಸ್., ಇವರನ್ನು ಆತ್ಮೀಯವಾಗಿ ಸ್ವಾಗತಿಸಲಾಯಿತು. ಹೆಚ್ಚುವರಿ ಕರ್ತವ್ಯದಲ್ಲಿ ಕುಲಸಚಿವ (ಆಡಳಿತ) ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಶ್ರೀ ಸ್ನೇಹಲ್ ಸುಧಾಕರ್ ಲೋಖಂಡೆ ಹಾಗೂ ಸಿಂಡಿಕೇಟ್ ಅವಧಿ ಮುಗಿದಿರುವ ಪ್ರಾಂಶುಪಾಲರಾದ ಡಾ.ಎ.ಟಿ. ಪದ್ಮೇಗೌಡ, ಡಿ.ವಿ.ಎಸ್., ಸಂಜೆ ಕಾಲೇಜು, ಶಿವಮೊಗ್ಗ ಹಾಗೂ ಡಾ.ಸಂಧ್ಯಾ ಕಾವೇರಿ, ಕಟೀಲ್ ಅಶೋಕ್ ಪೈ ಸ್ಮಾರಕ ಕಾಲೇಜು, ಶಿವಮೊಗ್ಗ ಇವರಿಗೆ ಧನ್ಯವಾದ ಸಲ್ಲಿಸಲಾಯಿತು.

ನಂತರ ಕಾರ್ಯಸೂಚಿಯನ್ವಯ ವಿಷಯಗಳನ್ನು ಕೈಗೆತ್ತಿಕೊಳ್ಳಲಾಯಿತು.

## ಪ್ರಾಧಿಕಾರ ವಿಭಾಗ

**2024-ಸಿಂ-1.01:** ದಿನಾಂಕ:02-12-2023 ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿ ದೃಢೀಕರಣ ಹಾಗೂ ಸಿಂಡಿಕೇಟ್ ಸದಸ್ಯರುಗಳಿಂದ ಬಂದ ಆಕ್ಷೇಪಣೆಗಳ ಚರ್ಚೆ ಮತ್ತು ನಿರ್ಣಯ.



ಕುಲಸಚಿವರು
ಕು.ವಿ./ ಜ್ಞಾನಸಹ್ಯಾದ್ರಿ

Scanned with OKEN Scanner

**ಚರ್ಚೆ:** ಸದಸ್ಯರಾದ ಶ್ರೀ ಶಶಿಧರ್,ಬಿ.ಎನ್.,ರವರು ಮಾತನಾಡಿ, ವಿಶ್ವವಿದ್ಯಾಲಯ ಕಾಯ್ದೆ-2000ರ ಪ್ರಕರಣ 28(2)ರ ಪ್ರಕಾರ 8 ವಾರಗಳಿಗೆ ಒಂದು ಸಭೆ ನಡೆಸಬೇಕು. ಹಿಂದಿನ ಸಭೆ 02-12-2023 ರಂದು ನಡೆದಿದ್ದು, ಈಗ ವಿಶೇಷ ಸಭೆಯ ಬದಲಾಗಿ ಸಾಮಾನ್ಯ ಸಭೆಯನ್ನೇ ಕರೆಯಬೇಕಾಗಿತ್ತು ಎಂದರು. ಮಾನ್ಯ ಕುಲಪತಿಗಳು ಮಾತನಾಡಿ, ಆಡಳಿತಾತ್ಮಕ ಕಾರಣಗಳಿಂದ ಸಾಮಾನ್ಯ ಸಭೆಯನ್ನು ಕರೆಯಲು ಆಗಲಿಲ್ಲ. ಕೆಲವು ತುರ್ತು ಶೈಕ್ಷಣಿಕ ಮತ್ತು ಆಡಳಿತಾತ್ಮಕ ವಿಷಯಗಳ ಕುರಿತು ನಿರ್ಣಯಗಳನ್ನು ತೆಗೆದುಕೊಳ್ಳುವ ಅಗತ್ಯವಿದ್ದುದ್ದರಿಂದ ವಿಶೇಷ ಸಭೆಯನ್ನು ಕರೆಯಲಾಗಿದೆ. ಲೋಕಸಭಾ ಚುನಾವಣೆಯ ನೀತಿ ಸಂಹಿತೆ ಶೀಘ್ರದಲ್ಲಿಯೇ ಜಾರಿಯಾಗಲಿರುವ ಹಿನ್ನೆಲೆಯಲ್ಲಿ ಇದೇ ತಿಂಗಳ ಕೊನೆಯ ವಾರದಲ್ಲಿ ಸಿಂಡಿಕೇಟ್‌ನ ಸಾಮಾನ್ಯ ಸಭೆಯನ್ನು ಕರೆಯಲಾಗುವುದು ಎಂದರು. ಸದಸ್ಯರಾದ ಶ್ರೀ ಶಾಂತಕುಮಾರ್, ಜಿ.ಎಸ್., ರವರು ಮಾತನಾಡಿ ಪರೀಕ್ಷಾ ವಿಭಾಗದ ಇ-ಟೆಂಡರ್‌ಗೆ ಸಂಬಂಧಪಟ್ಟ ಪ್ರೀ ಬಿಡ್ ಸಭೆಯ ಸಭಾಸೂಚಿ ತಲುಪಿಲ್ಲ. ನಡಾವಳಿಯಲ್ಲಿ ಗೈರುಹಾಜರಿ ಎಂದು ನಮೂದಿಸಿದೆ. ಫೋನ್ ಮೂಲಕ ಕೂಡ ಮಾಹಿತಿ ನೀಡಿಲ್ಲ ಎಂದರು. ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡಿ, ಮುಂದೆ ಈ ರೀತಿ ವಿಳಂಬ ಆಗದಂತೆ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ದಿನಾಂಕ:02-12-2023 ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಯ ವಿಷಯ ಸಂಖ್ಯೆ:2023-ಸಿಂ-7.01ರಲ್ಲಿನ ನಿರ್ಣಯದ ಮೊದಲ ಪ್ಯಾರಾದ ಕುರಿತಾಗಿ ಚರ್ಚಿಸಿ ನಿರ್ಣಯವನ್ನು ಜಾರಿಗೊಳಿಸಿ ಸಮಿತಿಯ ವರದಿಯನ್ನು ಮುಂದೆ ನಡೆಯುವ ಸಭೆಗೆ ಮಂಡಿಸಬೇಕೆಂದು ನಿರ್ಣಯಿಸಲಾಯಿತು.

ಸದಸ್ಯರಾದ ಶ್ರೀ ಶಾಂತಕುಮಾರ್, ಬಿ.ಎನ್.ರವರು ವಿಷಯ ಸಂಖ್ಯೆ:2023-ಸಿಂ-7.20(ಎಫ್)ನ ನಿರ್ಣಯದ ಕುರಿತು ಮಾತನಾಡಿ, ಪಿ.ಜಿ. ಅಧ್ಯಾಪಕರ ಸ್ಥಾನೀಕರಣದ ಬಿ.ಓ.ಎ., ಪ್ರಸ್ತಾವನೆಯನ್ನು ಅನುಮೋದಿಸಿ, ಸಹ್ಯಾದ್ರಿ ಕಾಲೇಜಿನ ಯು.ಜಿ. ಅಧ್ಯಾಪಕರ ಬಿ.ಓ.ಎ., ಸ್ಥಾನೀಕರಣ ಕಳೆದ ಸಿಂಡಿಕೇಟ್ ಸಭೆಯ ನಡಾವಳಿಯಲ್ಲಿ ಅನುಮೋದಿಸಿರುವುದಿಲ್ಲ ಎಂದರು. ಮಾನ್ಯ ಕುಲಪತಿಯವರು ಮಾತನಾಡಿ ದಿನಾಂಕ:27-07-2023ರಂದು ನಡೆದ ಸಿಂಡಿಕೇಟ್ ಸಭೆಯ ವಿಷಯ ಸಂಖ್ಯೆ:2023-ಸಿಂ-5.05ರಲ್ಲಿ ಸಿ.ಎ.ಎಸ್. ಮೂಲಕ ವೃತ್ತಿ ಪದೋನ್ನತಿ ಪಡೆದ ಸ್ನಾತಕೋತ್ತರ ವಿಭಾಗಗಳ ಅಧ್ಯಾಪಕರು ಹಾಗೂ ಸಹ್ಯಾದ್ರಿ ಕಾಲೇಜಿನ ಯು.ಜಿ.ಅಧ್ಯಾಪಕರ ಬಿ.ಓ.ಎ. ಸಭೆಯ ನಡಾವಳಿಗಳನ್ನು ಅನುಮೋದಿಸಲಾಗಿದೆ. ಆದರೆ, ಸಹ್ಯಾದ್ರಿ ಕಾಲೇಜಿನ ಪ್ರಾಧ್ಯಾಪಕರುಗಳ ಸ್ಥಾನೀಕರಣದ ದಿನಾಂಕ ಪರಿಷ್ಕರಣೆಯ ವಿಷಯವನ್ನು ಮಾತ್ರ ಮುಂದೂಡಲಾಗಿತ್ತು ಎಂದರು. ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡಿ ಸಹ್ಯಾದ್ರಿ ಕಾಲೇಜಿನ ಅಧ್ಯಾಪಕರಿಗೆ ವಿನಿಯಮ ಅನುಮೋದನೆಯಾದ ದಿನಾಂಕದ ನಂತರದಿಂದ ವೃತ್ತಿಪದೋನ್ನತಿ ಮೂಲಕ ಈ ಮೊದಲೇ ಪ್ರಾಧ್ಯಾಪಕ ಹುದ್ದೆಗೆ ಬಡ್ತಿ ನೀಡಲಾಗಿದೆ. ಆದರೆ, ಅವರು ವಿನಿಯಮ ಅನುಮೋದನೆ ದಿನಾಂಕದ ಬದಲಾಗಿ ಅರ್ಹತಾ ದಿನಾಂಕದಿಂದ ಪರಿಗಣಿಸುವಂತೆ ಸ್ಥಾನೀಕರಣದ ದಿನಾಂಕ ಪರಿಷ್ಕರಣೆಗಾಗಿ ಕೋರಿದ್ದರಿಂದ ಮತ್ತೊಮ್ಮೆ ಬಿ.ಓ.ಎ. ಸಭೆ ನಡೆಸಲಾಗಿತ್ತು ಎಂದರು. ಈ ಕುರಿತು ಸರ್ಕಾರದಿಂದ ಮಾರ್ಗದರ್ಶನ ಪಡೆದು ಕ್ರಮವಹಿಸುವುದಾಗಿ ಕುಲಸಚಿವರು ತಿಳಿಸಿದರು.

ಪ್ರೊ.ಕೆ.ಚಂದ್ರಶೇಖರ್‌ರವರು ವಿಷಯ ಸಂಖ್ಯೆ:2023-ಸಿಂ-7.20(ಡಿ)(2)ರಲ್ಲಿ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪಕುಲಸಚಿವರನ್ನು 3 ವರ್ಷಕ್ಕೊಮ್ಮೆ ವರ್ಗಾವಣೆ ಮಾಡಬೇಕೆಂದು ನಿರ್ಣಯವಾಗಿತ್ತು. ಆದರೆ, ಅಧಿಕಾರಿಗಳಿಗೆ ಅವಧಿ ನಿಗದಿಪಡಿಸಿರುವುದಿಲ್ಲ ಮತ್ತು ಮುಂದಿನ ದಿನಗಳಲ್ಲಿ ಪರಿಶೀಲಿಸಲಾಗುವುದು ಎಂಬುದನ್ನು ಒಪ್ಪಲು ಸಾಧ್ಯವಿಲ್ಲ. 3 ವರ್ಷ ಸೇವೆ ಸಲ್ಲಿಸಿದ ಉಪಕುಲಸಚಿವರನ್ನು ಕಡ್ಡಾಯವಾಗಿ ವರ್ಗಾವಣೆ ಮಾಡಲು ನಿರ್ಣಯಿಸಲಾಯಿತು ಎಂದು ನಡಾವಳಿಯಲ್ಲಿ ಸೇರ್ಪಡೆ ಮಾಡಬೇಕು ಎಂದರು.

ಕುಲಸಚಿವರು ಮಾತನಾಡಿ, ಆಡಳಿತಾತ್ಮಕ ವ್ಯವಸ್ಥೆಯಲ್ಲಿ ಅಗತ್ಯಕ್ಕೆ ಅನುಗುಣವಾಗಿ ಅಧ್ಯಾಪಕರನ್ನು ಉಪಕುಲಸಚಿವರಾಗಿ ನಿಯೋಜಿಸಲಾಗುತ್ತದೆ. ಅವರಿಗೆ ಕಾಲಮಿತಿ ನಿಗದಿಪಡಿಸಲು ಆಗುವುದಿಲ್ಲ. ಆದಾಗ್ಯೂ, ಈ ಕುರಿತು ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದರು.



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ

Scanned with OKEN Scanner

ಪ್ರೊ.ಚಂದ್ರಶೇಖರ್‌ರವರು ಕೇಳಿರುವ ಆಕ್ಷೇಪಣೆಗಳನ್ನೇ ಡಾ. ಎ.ಟಿ. ಪದ್ಮೇಗೌಡರವರು ಕೂಡ ಯಥಾವತ್ತಾಗಿ ಸಲ್ಲಿಸಿರುವುದರಿಂದ ಅವರ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಲಿಲ್ಲ.

**ನಿರ್ಣಯ:** ಸುದೀರ್ಘವಾಗಿ ಚರ್ಚಿಸಿದ ಸಭೆಯು ದಿನಾಂಕ:27-07-2023ರಂದು ನಡೆದ ಸಿಂಡಿಕೇಟ್ ಸಭೆಯ ವಿಷಯ ಸಂಖ್ಯೆ:2023-ಸಿಂ-5.05ರಲ್ಲಿನ ಘಟಕ ಕಾಲೇಜುಗಳ ಪ್ರಾಧ್ಯಾಪಕರ ಸ್ಥಾನೀಕರಣದ ದಿನಾಂಕಗಳ ಪರಿಷ್ಕರಣೆ ಕುರಿತಾಗಿ ಕುಲಸಚಿವರು (ಆಡಳಿತ) ಇವರು ಇನ್ನೊಮ್ಮೆ ಪರಿಶೀಲಿಸಿ ಕ್ರಮ ಕೈಗೊಳ್ಳಬೇಕು ಹಾಗೂ ಉಳಿದ ಸ್ನಾತಕ ಹಾಗೂ ಸ್ನಾತಕೋತ್ತರ ಅಧ್ಯಾಪಕರುಗಳಿಗೆ ಬಿ.ಓ.ಎ., ಶಿಫಾರಸ್ಸಿನ ಪ್ರಕಾರ ವೃತ್ತಿಪದೋನ್ನತಿ ಆದೇಶ ನೀಡಲು ಆಡಳಿತಾತ್ಮಕ ಕ್ರಮವಹಿಸಬೇಕೆಂದು ನಿರ್ಣಯಿಸಿದ ಸಭೆಯು ದಿನಾಂಕ: 02-12-2024ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ಸಭೆಯು ಅನುಮೋದಿಸಿತು.

## ಪರೀಕ್ಷಾ ವಿಭಾಗ

**2024-ಸಿಂ-1.02:** ದ್ವಿಗುಣ ಅವಧಿ ಪೂರ್ಣಗೊಳಿಸಿದ (Double the Duration) ಸ್ನಾತಕ ಮತ್ತು ಸ್ನಾತಕೋತ್ತರ ಪದವಿಯ ಸೆಮಿಸ್ಟರ್ ಪದವಿಯ ವಿದ್ಯಾರ್ಥಿಗಳಿಗೆ ವಿಶೇಷ ಸಂದರ್ಭವೆಂದು ಪರಿಗಣಿಸಿ ಪರೀಕ್ಷೆಗೆ ಅವಕಾಶ ನೀಡುವ ಬಗ್ಗೆ.

**ಚರ್ಚೆ:** ಕುಲಸಚಿವರು (ಮೌಲ್ಯಮಾಪನ)ರವರು ಮಾತನಾಡುತ್ತಾ, ವಿಶ್ವವಿದ್ಯಾಲಯದ ನಿಯಮಾವಳಿಯ ಪ್ರಕಾರ ವಿದ್ಯಾರ್ಥಿಗಳು ದ್ವಿಗುಣ ಅವಧಿಯೊಳಗೆ ಪದವಿಯನ್ನು ಪೂರ್ಣಗೊಳಿಸಬೇಕಾಗಿರುತ್ತದೆ. ಈ ರೀತಿ ದ್ವಿಗುಣ ಅವಧಿ ಮುಗಿದಾಗ್ಯೂ ಕೆಲವು ವಿಷಯಗಳಲ್ಲಿ ಅನುತ್ತೀರ್ಣರಾಗಿ ಪದವಿ ಪೂರ್ಣಗೊಳಿಸದೇ ಇರುವ ವಿದ್ಯಾರ್ಥಿಗಳು ವಿಶ್ವವಿದ್ಯಾಲಯಕ್ಕೆ ಮನವಿಗಳನ್ನು ಸಲ್ಲಿಸಿ ತಮಗೆ ಇನ್ನೊಮ್ಮೆ ಪರೀಕ್ಷೆಗೆ ಅವಕಾಶ ಕಲ್ಪಿಸಿಕೊಡುವಂತೆ ಕೋರಿರುತ್ತಾರೆ. ಈ ಹಿಂದೆ ಇಂತಹ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕದೊಂದಿಗೆ ವಿಶೇಷ ಶುಲ್ಕ ರೂ. 3000/-ಗಳ ದಂಡವನ್ನು ವಿಧಿಸಿ ವಿಶೇಷ ಸಂದರ್ಭವೆಂದು ಪರಿಗಣಿಸಿ ಪ್ರಾಧಿಕಾರಗಳ ಅನುಮೋದನೆಯೊಂದಿಗೆ ಪರೀಕ್ಷೆಗೆ ಅವಕಾಶ ಕಲ್ಪಿಸಿಕೊಡಲಾಗಿತ್ತು. ಆದುದರಿಂದ, 2003-04ರ ಹಾಗೂ ನಂತರದಲ್ಲಿ ಪದವಿಗೆ ಪ್ರವೇಶ ಪಡೆದು ದ್ವಿಗುಣ ಅವಧಿ ಪೂರ್ಣಗೊಳಿಸಿದರೂ ಕೂಡ ಕೆಲವು ವಿಷಯಗಳಲ್ಲಿ ಅನುತ್ತೀರ್ಣರಾಗಿರುವ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಯ ಸೆಮಿಸ್ಟರ್ ಸ್ಕೀಂ ವಿದ್ಯಾರ್ಥಿಗಳಿಗೆ ಇದೊಂದು ವಿಶೇಷ ಸಂದರ್ಭವೆಂದು ಪರಿಗಣಿಸಿ, ಮುಂದೆ ನಡೆಯುವ ಸ್ನಾತಕ ಮತ್ತು ಸ್ನಾತಕೋತ್ತರ ಪರೀಕ್ಷೆ ಸಮಯದಲ್ಲೇ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸುವ ಕುರಿತು ಅನುಮೋದನೆಗಾಗಿ ಮಂಡಿಸಿದೆ ಎಂದರು.

ಸದಸ್ಯರಾದ ಡಾ. ಅನಂತ,ಎಸ್., ರವರು ಮಾತನಾಡಿ, ಪ್ರಸ್ತುತ ಎನ್.ಇ.ಪಿ., ಪದ್ಧತಿ ಜಾರಿಯಾಗಿರುವುದರಿಂದ ಹಳೆಯ ವಿದ್ಯಾರ್ಥಿಗಳು ಅನುತ್ತೀರ್ಣರಾಗಿರುವ ವಿಷಯಗಳ ಪರೀಕ್ಷೆ ಬರೆದು ಪದವಿ ಪಡೆಯಲು ಇನ್ನೊಂದು ಅವಕಾಶ ನೀಡುವುದು ಉತ್ತಮ ಎಂದರು. ಶ್ರೀ.ಶಶಿಧರ್, ಬಿ.ಎನ್.ರವರು ಮಾತನಾಡಿ ರಾಜ್ಯದ ಹಲವಾರು ವಿಶ್ವವಿದ್ಯಾಲಯಗಳಲ್ಲಿ ದ್ವಿಗುಣ ಅವಧಿ ಮುಗಿದಿರುವ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಅವಕಾಶ ನೀಡಿದ್ದಾರೆ. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ನಮ್ಮಲ್ಲಿಯೂ ಪರಿಗಣಿಸಬೇಕು. ಪರೀಕ್ಷೆಗೆ ಅವಕಾಶ ನೀಡಿರುವ ಬಗ್ಗೆ 4 ಜಿಲ್ಲೆಗಳ ಕಾಲೇಜುಗಳಿಗೆ ಸುತ್ತೋಲೆ ಕಳುಹಿಸಿ, ವೆಬ್‌ಸೈಟ್‌ನಲ್ಲಿ ಕೂಡ ಪ್ರಕಟಿಸಬೇಕು ಮತ್ತು ಮಾಧ್ಯಮಗಳ ಮೂಲಕ ವ್ಯಾಪಕ ಪ್ರಚಾರ ನೀಡಬೇಕು ಎಂದರು.

**ನಿರ್ಣಯ:** ಸುದೀರ್ಘ ಚರ್ಚೆಯ ನಂತರ, 2003-04ರ ನಂತರದಲ್ಲಿ ಪ್ರವೇಶ ಪಡೆದು ದ್ವಿಗುಣ ಅವಧಿ ಪೂರ್ಣಗೊಳಿಸಿದರೂ ಕೂಡ ಕೆಲವು ವಿಷಯಗಳಲ್ಲಿ ಅನುತ್ತೀರ್ಣರಾಗಿರುವ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಯ ಸೆಮಿಸ್ಟರ್ ಸ್ಕೀಂ' ರೆಗ್ಯುಲರ್ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿಗಳಿಗೆ ಇದೊಂದು ವಿಶೇಷ ಸಂದರ್ಭವೆಂದು ಪರಿಗಣಿಸಿ, ಮುಂದೆ ನಡೆಯುವ ಸ್ನಾತಕ ಮತ್ತು ಸ್ನಾತಕೋತ್ತರ ಪರೀಕ್ಷೆ ಸಮಯದಲ್ಲೇ ರೂ.3,000/-ಗಳ ವಿಶೇಷ ಶುಲ್ಕಪಾವತಿಸಿ ಪರೀಕ್ಷೆ ತೆಗೆದುಕೊಳ್ಳಲು ಅವಕಾಶ ಕಲ್ಪಿಸಲು ಅನುಮತಿಸಿದ ಸಭೆಯು, ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಯ ಎಲ್ಲಾ ಕಾಲೇಜುಗಳ ರಿಪೀಟರ್ ವಿದ್ಯಾರ್ಥಿಗಳು ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿನಲ್ಲಿ ಪರೀಕ್ಷೆಗೆ ಹಾಜರಾಗಬೇಕೆಂದು ನಿರ್ಣಯಿಸಿತು.



ಕುಲಸಚಿವರು
ಕು.ವಿ./ ಜ್ಞಾನಸಹ್ಯಾದ್ರಿ

Scanned with OKEN Scanner

**2024–ಸಿಂ–1.02(ಎ):** ವೆಬ್‌ಸೈಟ್ ಅಥವಾ ಡಿಜಿಲಾಕರ್ ಮೂಲಕ ಪಡೆಯುವ ಅಂಕಪಟ್ಟಿಗಳಿಗೆ ಶುಲ್ಕ ನಿಗದಿಪಡಿಸುವ ಕುರಿತು.

**ಚರ್ಚೆ:** ಕುಲಸಚಿವ (ಮೌಲ್ಯಮಾಪನ)ರವರು ವಿಷಯ ಮಂಡಿಸಿ ಮಾತನಾಡುತ್ತಾ, ವಿಶ್ವವಿದ್ಯಾಲಯದ ವಿವಿಧ ಸ್ನಾತಕ/ಸ್ನಾತಕೋತ್ತರ ಪರೀಕ್ಷೆಗಳಿಗೆ ಸಂಬಂಧಿಸಿದ ಅಂಕಪಟ್ಟಿ ಶುಲ್ಕವಾಗಿ ರೂ.265/–ಗಳನ್ನು ನಿಗದಿಪಡಿಸಿದೆ. ಆದರೆ ಸರ್ಕಾರದ ಪತ್ರ ಸಂಖ್ಯೆ:ಇಡಿ 32 ವಿವಿಧ 2023 ಬೆಂಗಳೂರು, ದಿನಾಂಕ:27–12–2023ರಲ್ಲಿ ವೆಬ್‌ಸೈಟ್/ಡಿಜಿಲಾಕರ್‌ನ ಮೂಲಕ ಅಂಕಪಟ್ಟಿಗಳನ್ನು ವಿದ್ಯಾರ್ಥಿಗಳು ಡೌನ್‌ಲೋಡ್ ಮಾಡಿಕೊಂಡು ಮುದ್ರಿಸಿಕೊಳ್ಳಲು ಅವಕಾಶವಿರುವುದರಿಂದ ಮುದ್ರಿತ ಅಂಕಪಟ್ಟಿ ಪಡೆಯಲು ಇಚ್ಛಿಸದ ವಿದ್ಯಾರ್ಥಿಗಳಿಗೆ ಅಂಕಪಟ್ಟಿ ಶುಲ್ಕ ಪಾವತಿಯಿಂದ ವಿನಾಯಿತಿ ನೀಡಲು ನಿರ್ದೇಶಿಸಿರುವ ಹಿನ್ನೆಲೆಯಲ್ಲಿ ಸಭೆಯ ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ ಎಂದರು. ಸದಸ್ಯರಾದ, ಡಾ.ಅನಂತ್, ಎಸ್., ರವರು ಮಾತನಾಡಿ ಈ ವಿಷಯದ ಕುರಿತಾಗಿ ಯು.ಜಿ.ಸಿ., ಹಾಗೂ ನ್ಯಾಯಾಲಯದ ಆದೇಶಗಳನ್ನು ಪರಿಶೀಲಿಸಬೇಕು ಎಂದರು.

**ನಿರ್ಣಯ:** ಸುದೀರ್ಘ ಚರ್ಚೆಯ ನಂತರ, ವೆಬ್‌ಸೈಟ್/ಡಿಜಿಲಾಕರ್‌ನ ಮೂಲಕ ಅಂಕಪಟ್ಟಿಗಳನ್ನು ವಿದ್ಯಾರ್ಥಿಗಳು ಡೌನ್‌ಲೋಡ್ ಮಾಡಿಕೊಂಡು ಮುದ್ರಿಸಿಕೊಳ್ಳಲು ಅವಕಾಶವಿರುವುದರಿಂದ ಮುದ್ರಿತ ಅಂಕಪಟ್ಟಿ ಪಡೆಯಲು ಇಚ್ಛಿಸದ ವಿದ್ಯಾರ್ಥಿಗಳಿಗೆ ಅಂಕಪಟ್ಟಿ ಶುಲ್ಕ ಪಾವತಿಯಿಂದ ವಿನಾಯಿತಿ ನೀಡುವ ಕುರಿತು ಸರ್ಕಾರದ ಆದೇಶವನ್ನು ವಿಶ್ವವಿದ್ಯಾಲಯದಲ್ಲಿ ಜಾರಿಗೊಳಿಸಲು ನಿರ್ಣಯಿಸಿದ ಸಭೆಯು, ಪರೀಕ್ಷಾ ಶುಲ್ಕದೊಂದಿಗೆ ಅಂಕಪಟ್ಟಿ ಶುಲ್ಕ ಪಾವತಿಸದ ವಿದ್ಯಾರ್ಥಿಗಳು, ಮುಂದೆ ವಿಶ್ವವಿದ್ಯಾಲಯದಿಂದ ಅಂಕಪಟ್ಟಿ ಪಡೆಯಲು ಇಚ್ಛಿಸಿದಲ್ಲಿ ಅವರಿಂದ ವಿಶೇಷ ಶುಲ್ಕ ಪಾವತಿಸಿಕೊಂಡು ಅಂಕಪಟ್ಟಿ ನೀಡಬೇಕೆಂದು ನಿರ್ಣಯಿಸಲಾಯಿತು.

## ಮಾನವ ಸಂಪನ್ಮೂಲ ಮತ್ತು ನಿರ್ವಹಣೆ ವಿಭಾಗ

**2024–ಸಿಂ–1.03** 2023–24ನೇ ಶೈಕ್ಷಣಿಕ ಸಾಲಿಗೆ ಅತಿಥಿ ಉಪನ್ಯಾಸಕರುಗಳಿಗೆ ಸಂಭಾವನೆಯನ್ನು ನಿಗದಿಪಡಿಸುವ ಕುರಿತು.

**ಚರ್ಚೆ:** ವಿಶ್ವವಿದ್ಯಾಲಯದ ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ಸ್ನಾತಕೋತ್ತರ ಕೇಂದ್ರ, ಕಡೂರು ಮತ್ತು ಚಿಕ್ಕಮಗಳೂರು ಹಾಗೂ ಘಟಕ/ನೇರ ಆಡಳಿತಕ್ಕೊಳಪಟ್ಟ ಕಾಲೇಜುಗಳಲ್ಲಿ 2023–24ನೇ ಶೈಕ್ಷಣಿಕ ಸಾಲಿನ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳ ಹೆಚ್ಚುವರಿ ಬೋಧನಾ ಕಾರ್ಯಭಾರ ನಿರ್ವಹಣೆಗಾಗಿ ನೇಮಕ ಮಾಡಿಕೊಂಡಿರುವ ಅತಿಥಿ ಉಪನ್ಯಾಸಕರಿಗೆ ಕರ್ನಾಟಕ ಸರ್ಕಾರವು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರಿಗೆ ನಿಗದಿಪಡಿಸಿರುವ ದರದಲ್ಲಿಯೇ ಸಂಭಾವನೆಯನ್ನು ನಿಗದಿಪಡಿಸಿ ಆದೇಶ ಹೊರಡಿಸಿದೆ. ಆದರೆ, ಅತಿಥಿ ಉಪನ್ಯಾಸಕರುಗಳು ಮನವಿ ಸಲ್ಲಿಸಿ ಯು.ಜಿ.ಸಿ., ನಿಗದಿಪಡಿಸಿರುವಂತೆ ಹಾಗೂ ರಾಜ್ಯದ ಬೇರೆ ವಿಶ್ವವಿದ್ಯಾಲಯಗಳು ನಿಗದಿಪಡಿಸಿರುವಂತೆ ಹೆಚ್ಚಿನ ಸಂಭಾವನೆ ಪಾವತಿಸುವಂತೆ ಮನವಿ ಮಾಡಿದ್ದಾರೆ. ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲಗಳು ಗಣನೀಯವಾಗಿ ಕಡಿಮೆಯಾಗಿದ್ದು, ಯಾವುದೇ ಸರ್ಕಾರಿ ಅಥವಾ ಇತರೆ ಆದಾಯ ಮೂಲಗಳಿಲ್ಲದೆ ಹೆಚ್ಚಿನ ಸಂಭಾವನೆ ನೀಡುವುದು ಕಷ್ಟಸಾಧ್ಯವಾಗುತ್ತದೆ ಎಂದು ಹಣಕಾಸು ಅಧಿಕಾರಿಗಳು ತಿಳಿಸಿದ್ದಾರೆ ಎಂಬುದನ್ನು ಸಭೆಗೆ ವಿವರಿಸಿ ಅನುಮೋದನೆ ಕೋರಿದರು.

ಸದಸ್ಯರಾದ ಶ್ರೀ ಬಿ.ಎನ್.ಶಶಿಧರ್‌ರವರು ಮಾತನಾಡಿ, ಒಮ್ಮೆ ಹೆಚ್ಚಿಸಿದ ಗೌರವಧನವನ್ನು ಕಡಿಮೆ ಮಾಡುವುದು ಸರಿಯಲ್ಲ. ಇದರಿಂದ ಅವರ ಜೀವನ ನಿರ್ವಹಣೆಗೆ ತೊಂದರೆಯಾಗುತ್ತದೆ. ಆದುದರಿಂದ ಕನಿಷ್ಟ ರೂ.30,000/– ಹಾಗೂ ಗರಿಷ್ಟ ರೂ.45,000/–ಗಳನ್ನು ನಿಗದಿಪಡಿಸಬಹುದು ಎಂದರು. ಶ್ರೀ ಶಾಂತಕುಮಾರ್‌ರವರು ಕೂಡ ಇದಕ್ಕೆ ಧ್ವನಿಗೂಡಿಸಿದರು. ಸದಸ್ಯರಾದ ಡಾ. ಅನಂತ, ಎಸ್.,ರವರು ಮಾತನಾಡಿ, ಸರ್ಕಾರಿ ಕಾಲೇಜುಗಳ ಅತಿಥಿ ಉಪನ್ಯಾಸಕರ ಸಂಭಾವನೆಯನ್ನು ಮಾಸಿಕ ತಲಾ ರೂ.5000/–ಗಳಷ್ಟು ಹೆಚ್ಚಿಸಲು ಸರ್ಕಾರವು ಕ್ರಮ ಕೈಗೊಂಡಿದೆ. ಸರ್ಕಾರ ಪರಿಷ್ಕರಿಸಿದಲ್ಲಿ ವಿಶ್ವವಿದ್ಯಾಲಯ ಕೂಡ ಸದರಿ ದರಗಳನ್ನು ಅಳವಡಿಸಿಕೊಳ್ಳಬಹುದು



ಕುಲಸಚಿವರು
ಕುವೆಂಪು ವಿಶ್ವವಿದ್ಯಾಲಯ

Scanned with OKEN Scanner

ಎಂದರು. ಡಾ.ಸಣ್ಣಹನುಮಪ್ಪರವರು ಮಾತನಾಡಿ, ಸರ್ಕಾರ ನಿಗದಿಪಡಿಸಿರುವುದಕ್ಕಿಂತ ಹೆಚ್ಚಿನ ಸಂಭಾವನೆ ನೀಡಲು ವಿಶ್ವವಿದ್ಯಾಲಯದಲ್ಲಿ ಸಾಕಷ್ಟು ಆರ್ಥಿಕ ಸಂಪನ್ಮೂಲ ಇದೆಯೇ ಎಂಬುದನ್ನು ಪರಿಶೀಲಿಸಬೇಕಾಗುತ್ತದೆ. ಸರ್ಕಾರಿ ದರಕ್ಕಿಂತ ಹೆಚ್ಚಿಗೆ ಪಾವತಿಸಿದಲ್ಲಿ ಆಡಿಟ್ ಆಕ್ಷೇಪಣೆಯಾಗಬಹುದು ಎಂದರು.

ಸಭೆಗೆ ವಿಶೇಷ ಆಹ್ವಾನಿತರಾಗಿ ಆಗಮಿಸಿದ್ದ ಹಣಕಾಸು ಅಧಿಕಾರಿಗಳು ಮಾತನಾಡಿ, ವಿಶ್ವವಿದ್ಯಾಲಯದ ಆರ್ಥಿಕ ಪರಿಸ್ಥಿತಿ ಉತ್ತಮವಾಗಿಲ್ಲ. ಸರ್ಕಾರದಿಂದ ನೌಕರರ ವೇತನ ಹಾಗೂ ಪಿಂಚಣಿ ಹೊರತುಪಡಿಸಿ ಬೇರೆ ಯಾವುದೇ ಅಭಿವೃದ್ಧಿ ಅನುದಾನ ಬಿಡುಗಡೆಯಾಗಿಲ್ಲ. ವಿವಿಧ ಶುಲ್ಕಗಳ ರೂಪದಲ್ಲಿ ಸಂಗ್ರಹಣೆಯಾಗುವ ಹಣದಿಂದಲೇ ಅತಿಥಿ ಉಪನ್ಯಾಸಕರ ವೇತನ, ಹೊರಗುತ್ತಿಗೆ ನೌಕರರ ವೇತನ, ವಿಶ್ವವಿದ್ಯಾಲಯದ ಹಾಗೂ ಘಟಕ ಕಾಲೇಜುಗಳ ಶೈಕ್ಷಣಿಕ, ಆಡಳಿತಾತ್ಮಕ ಮತ್ತು ನಿರ್ವಹಣಾ ವೆಚ್ಚಗಳನ್ನು ಭರಿಸಬೇಕಾಗಿದೆ. ಇವುಗಳ ಜೊತೆಗೆ ಎನ್.ಪಿ.ಎಸ್.ವಂತಿಕೆ ಹಾಗೂ ಅಧ್ಯಾಪಕೇತರ ನೌಕರರ ಐ.ಆರ್., ಮುಂತಾದುವುಗಳನ್ನು ಕೂಡ ಪಾವತಿಸಬೇಕಾಗಿದ್ದು, ಅನುದಾನ ಹೊಂದಿಸುವುದು ತುಂಬಾ ಕಷ್ಟವಾಗಿದೆ. ಆದಾಗ್ಯೂ, ಮಂಜೂರಾದ ಹುದ್ದೆಗಳಿಗೆ ಮಾತ್ರ ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಂಡು, ಸರ್ಕಾರ ನಿಗದಿಪಡಿಸಿರುವ ದರದಲ್ಲಿ ಸಂಭಾವನೆ ಪಾವತಿಸಿದರೆ, ಸರ್ಕಾರದಿಂದ ಅನುದಾನ ಕೇಳಬಹುದು ಸರ್ಕಾರ ನಿಗದಿಪಡಿಸಿದ ದರಕ್ಕಿಂತ ಹೆಚ್ಚುವರಿ ಪಾವತಿಸಿದಲ್ಲಿ ಸರ್ಕಾರವು ಆಕ್ಷೇಪಿಸುತ್ತದೆ. ಅಲ್ಲದೇ, ಅತಿಥಿ ಉಪನ್ಯಾಕರ ಗೌರವಧನ ಪರಿಷ್ಕರಿಸುವುದಾದಲ್ಲಿ ಹಣಕಾಸು ಸಮಿತಿ ಸಭೆಯ ಅನುಮೋದನೆ ಪಡೆಯಬೇಕಾಗುತ್ತದೆ ಎಂದರು.

ಮಾನ್ಯ ಕುಲಪತಿಯವರು ಮಾತನಾಡಿ, ವಿಶ್ವವಿದ್ಯಾಲಯಕ್ಕೆ ಬೋಧಕ ಹುದ್ದೆಗಳು 2002ನೇ ಇಸವಿಗೆ ಮೊದಲು ಮಂಜೂರಾಗಿದ್ದವು. ನಂತರದಲ್ಲಿ, ಹಿಂದಿನ ವರ್ಷಗಳಲ್ಲಿ ವಿದ್ಯಾರ್ಥಿಗಳ ಅಗತ್ಯ ಹಾಗೂ ಬೇಡಿಕೆಗೆ ಅನುಗುಣವಾಗಿ ವಿಶ್ವವಿದ್ಯಾಲಯ ಹಾಗೂ ಘಟಕ ಕಾಲೇಜುಗಳಲ್ಲಿ ಹಲವಾರು ಹೊಸ ಸ್ನಾತಕ ಮತ್ತು ಸ್ನಾತಕೋತ್ತರ ಅಧ್ಯಯನ ವಿಭಾಗಗಳನ್ನು ಸರ್ಕಾರದ ಅನುಮೋದನೆ ನಿರೀಕ್ಷಿಸಿ ಆರಂಭಿಸಲಾಗಿದೆ. ಹುದ್ದೆಗಳ ಸೃಜನೆಗಾಗಿ ಸರ್ಕಾರಕ್ಕೆ ವಿನಿಯಮ ಸಲ್ಲಿಸಲಾಗಿದ್ದು, ಇನ್ನೂ ಅನುಮೋದನೆಯಾಗಿಲ್ಲ. ಹೊಸ ಅಧ್ಯಯನ ವಿಭಾಗಗಳನ್ನು ಆರಂಭಿಸಿದ್ದರಿಂದ ಹಾಗೂ ಇರುವ ಅಧ್ಯಯನ ವಿಭಾಗಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿದ್ದರಿಂದ ಹೆಚ್ಚಿನ ಬೋಧನಾ ಕಾರ್ಯಭಾರ ಸೃಜನೆಯಾಗಿದೆ. ಈ ಹಿನ್ನೆಲೆಯಲ್ಲಿ ಕಾರ್ಯಭಾರಕ್ಕನುಗುಣವಾಗಿ ಹೆಚ್ಚಿನ ಸಂಖ್ಯೆಯ ಅತಿಥಿ ಉಪನ್ಯಾಸಕರ ಅಗತ್ಯವಿದೆ ಎಂದರು.

**ನಿರ್ಣಯ:** ಸುದೀರ್ಘ ಚರ್ಚೆಯ ನಂತರ ಸರ್ಕಾರಿ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರ ಸಂಭಾವನೆಯನ್ನು ಮಾಸಿಕ ತಲಾ ರೂ.5,000/-ಗಳಷ್ಟು ಹೆಚ್ಚಿಸಲು ಸರ್ಕಾರವು ಕ್ರಮ ಕೈಗೊಂಡಿರುವ ಹಿನ್ನೆಲೆಯಲ್ಲಿ ಸರ್ಕಾರದ ಆದೇಶ ನಿರೀಕ್ಷಿಸಿ ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗಗಳು ಹಾಗೂ ಘಟಕ/ ನೇರ ಆಡಳಿತಕ್ಕೊಳಪಟ್ಟ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರಿಗೆ ಗೌರವಧನವನ್ನು ಈ ಕೆಳಗಿನಂತೆ ಪರಿಷ್ಕರಿಸಿ ಹೆಚ್ಚಿಸಲು ಸಭೆಯು ಅನುಮೋದಿಸಿತು.

| | | |
|---|---|---|
| 01 | 5 ವರ್ಷಗಳಿಗಿಂತ ಕಡಿಮೆ ಅವಧಿಯ ಸೇವಾ ಅನುಭವ ಹೊಂದಿರುವ ಮತ್ತು ಯು.ಜಿ.ಸಿ. ನಿಗದಿಪಡಿಸಿದ ಅರ್ಹತೆ ಹೊಂದಿಲ್ಲದವರಿಗೆ | ರೂ. 31,000 |
| 02 | 5 ವರ್ಷಗಳಿಗಿಂತ ಕಡಿಮೆ ಸೇವಾ ಅನುಭವ ಹೊಂದಿರುವ ಮತ್ತು ಯು.ಜಿ.ಸಿ. ನಿಗದಿಪಡಿಸಿದ ಅರ್ಹತೆ ಹೊಂದಿರುವವರಿಗೆ | 33,000 |
| 03 | 5 ರಿಂದ 15 ವರ್ಷಗಳ ಅವಧಿಯ ಸೇವೆ ಸಲ್ಲಿಸುತ್ತಿರುವ ಮತ್ತು ಯು.ಜಿ.ಸಿ. ನಿಗದಿಪಡಿಸಿದ ಅರ್ಹತೆ ಹೊಂದಿಲ್ಲದವರಿಗೆ | 35,000 |
| 04 | 5 ರಿಂದ 15 ವರ್ಷಗಳ ಅವಧಿಯ ಸೇವೆ ಸಲ್ಲಿಸುತ್ತಿರುವ ಮತ್ತು ಯು.ಜಿ.ಸಿ. ನಿಗದಿಪಡಿಸಿದ ಅರ್ಹತೆ ಹೊಂದಿರುವವರಿಗೆ | 37,000 |



ಕುಲಸಚಿವರು
ಕು.ವಿ./ ಜ್ಞಾನಸಹ್ಯಾದ್ರಿ

Scanned with OKEN Scanner

| | | |
|---|---|---|
| 05 | ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ, 15 ವರ್ಷಗಳಿಗಿಂತ ಹೆಚ್ಚಿನ ಅವಧಿಯಿಂದ ಸೇವೆ ಸಲ್ಲಿಸುತ್ತಿರುವ ಮತ್ತು ಯು.ಜಿ.ಸಿ. ನಿಗದಿಪಡಿಸಿದ ಅರ್ಹತೆ ಹೊಂದಿಲ್ಲದವರಿಗೆ | 40,000 |
| 06 | ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ, 15 ವರ್ಷಗಳಿಗಿಂತ ಹೆಚ್ಚಿನ ಅವಧಿಯಿಂದ ಸೇವೆ ಸಲ್ಲಿಸುತ್ತಿರುವ ಮತ್ತು ಯು.ಜಿ.ಸಿ. ನಿಗದಿಪಡಿಸಿದ ಅರ್ಹತೆ ಹೊಂದಿರುವವರಿಗೆ | 42,000 |

ಮುಂದುರೆದು, ಫೆಬ್ರವರಿ–2024ರವರೆಗೆ ಈಗಾಗಲೇ ನೀಡಿರುವ ನೇಮಕಾತಿ ಆದೇಶದಲ್ಲಿ ತಿಳಿಸಿರುವ ದರದಲ್ಲಿ ಸಂಭಾವನೆ ಪಾವತಿಸುವಂತೆ ಹಾಗೂ ಮೇಲ್ಕಂಡ ಪರಿಷ್ಕೃತ ದರಗಳನ್ನು ಮಾರ್ಚ್–2024 ರಿಂದ ಅನ್ವಯವಾಗುವಂತೆ ಪಾವತಿಸಬೇಕೆಂದು ಸಭೆಯು ನಿರ್ಣಯಿಸಿತು.

**2024–ಸಿಂ–1.04** ಕುವೆಂಪು ವಿಶ್ವವಿದ್ಯಾಲಯದ ದೂರ ಶಿಕ್ಷಣ ನಿರ್ದೇಶನಾಲಯದಲ್ಲಿನ ಸಂಶೋಧನಾ ಮತ್ತು ಬೋಧನಾ ಸಹಾಯಕರುಗಳಾಗಿ ಸೇವೆ ಸಲ್ಲಿಸುತ್ತಿದ್ದವರನ್ನು ಅತಿಥಿ ಉಪನ್ಯಾಸಕರನ್ನಾಗಿ ನೇಮಿಸುವ ಕುರಿತು.

**ಚರ್ಚೆ:** ಕುಲಸಚಿವರು ಮಾತನಾಡುತ್ತಾ, ಕುವೆಂಪು ವಿಶ್ವವಿದ್ಯಾಲಯದ ದೂರ ಶಿಕ್ಷಣ ನಿರ್ದೇಶನಾಲಯದಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಅಧ್ಯಯನ ಸಾಮಾಗ್ರಿಗಳನ್ನು ವಿವಿಧ ವಿಭಾಗಗಳಿಗೆ ಕಳುಹಿಸುವ ಸಂಬಂಧ ಸಿದ್ಧತೆ ಮಾಡಿಕೊಳ್ಳುವುದು, ಆಂತರಿಕ ಮೌಲ್ಯಮಾಪನ ಮಾಡುವುದು, ಸಂಪರ್ಕ ತರಗತಿಗಳನ್ನು ಏರ್ಪಡಿಸುವುದು, ಮಾದರಿ ಪ್ರಶ್ನೆ ಪತ್ರಿಕೆಗಳನ್ನು ಸಿದ್ಧಪಡಿಸುವುದು, ಸಂಪರ್ಕ ತರಗತಿಗಳ ಮೇಲ್ವಿಚಾರಣೆ ನಡೆಸುವುದು ಮತ್ತು ವಿದ್ಯಾರ್ಥಿಗಳು ಹಾಗೂ ವಿಶ್ವವಿದ್ಯಾಲಯದ ವಿವಿಧ ಕಛೇರಿಗಳ ಮಧ್ಯೆ ಸಮನ್ವಯ ಸಾಧಿಸುವ ಕಾರ್ಯಕ್ಕಾಗಿ ಸಂಶೋಧನಾ ಮತ್ತು ಬೋಧನಾ ಸಹಾಯಕರುಗಳನ್ನು 2009–10ನೇ ಸಾಲಿನಲ್ಲಿ ಮಾಹೆಯಾನ ಗೌರವ ಸಂಭಾವನೆಯೊಂದಿಗೆ ನೇಮಕ ಮಾಡಲಾಗಿತ್ತು. ಆದರೆ, ದೂರ ಶಿಕ್ಷಣ ಕೋರ್ಸ್‌ಗಳನ್ನು ಕರ್ನಾಟಕ ಮುಕ್ತ ವಿಶ್ವವಿದ್ಯಾಲಯ ಹೊರತುಪಡಿಸಿ ಇತರೆ ಸಾಂಪ್ರದಾಯಿಕ ವಿಶ್ವವಿದ್ಯಾಲಯಗಳು ನಡೆಸುವಂತಿಲ್ಲವೆಂದು ರಾಜ್ಯ ಸರ್ಕಾರ ಆದೇಶಿಸಿದ ಹಿನ್ನೆಲೆಯಲ್ಲಿ ದೂರ ಶಿಕ್ಷಣ ಕೋರ್ಸ್‌ಗಳಿಗೆ 2019–20ನೇ ಸಾಲಿನಿಂದ ಪ್ರವೇಶಾತಿಯನ್ನು ಸ್ಥಗಿತಗೊಳಿಸಲಾಗಿದೆ.

ಈ ಹಿಂದೆ ನಡೆಸಲಾಗುತ್ತಿದ್ದ ಓ.ಡಿ.ಎಲ್ ಮಾದರಿಯ ಶಿಕ್ಷಣ ಕ್ರಮವನ್ನು ಕರ್ನಾಟಕ ಸರ್ಕಾರವು ರದ್ದುಪಡಿಸಿದ್ದುದರಿಂದ ತಾತ್ಕಾಲಿಕವಾಗಿ ನೇಮಕಗೊಂಡಿರುವ ಆರ್.ಟಿ.ಎ ಹಾಗೂ ಸಂಪರ್ಕಾಧಿಕಾರಿಗಳಿಗೆ ದೂರ ಶಿಕ್ಷಣ ನಿರ್ದೇಶನಾಲಯದಲ್ಲಿ ಪೂರ್ಣಪ್ರಮಾಣದ ಕಾರ್ಯಭಾರಗಳು ಇಲ್ಲದಿರುವುದರಿಂದ ವಿಶ್ವವಿದ್ಯಾಲಯದ ಆದೇಶಾನುಸಾರ ಸಂಬಂಧಪಟ್ಟ ವಿಷಯಗಳ ಅಧ್ಯಯನ ವಿಭಾಗಗಳಲ್ಲಿ ಬೋಧನಾ ಕಾರ್ಯ ನಿರ್ವಹಿಸುವಂತೆ ಹಾಗೂ ದೂರ ಶಿಕ್ಷಣ ನಿರ್ದೇಶನಾಲಯದಲ್ಲಿ ಪ್ರತಿ ದಿನ 02 ಗಂಟೆಗಳ ಅವಧಿ ಕೆಲಸ ನಿರ್ವಹಿಸುವಂತೆ ಸೂಚಿಸಲಾಗಿತ್ತು. ಪ್ರಸ್ತುತ ದೂರ ಶಿಕ್ಷಣ ನಿರ್ದೇಶನಾಲಯದಲ್ಲಿ ಆನ್‌ಲೈನ್ ಪದವಿ ಕೋರ್ಸು (ಪ್ರಾಯೋಗಿಕ ಪತ್ರಿಕೆ ಹೊರತುಪಡಿಸಿದ)ಗಳು ಮಾತ್ರ ಚಾಲ್ತಿಯಲ್ಲಿದ್ದು, ಆರ್.ಟಿ.ಎ. ಹಾಗೂ ಸಂಪರ್ಕಾಧಿಕಾರಿಗಳಿಗೆ ಕಾರ್ಯಭಾರ ಇಲ್ಲದಿರುವುದರಿಂದ ಎಲ್ಲಾ ಆರ್.ಟಿ.ಎ ಸಿಬ್ಬಂದಿಗಳಿಗೆ ಅತಿಥಿ ಉಪನ್ಯಾಸಕರ ಹುದ್ದೆಗಳಿಗೆ ಅರ್ಜಿ ಸಲ್ಲಿಸುವಂತೆ ತಿಳಿಸಿ ದಿನಾಂಕ:30–11–2023ರವರೆಗೆ ಮಾತ್ರ ಸೇವೆಯನ್ನು ಬಳಸಿಕೊಳ್ಳಲಾಗಿದೆ.

ಈ ಹಂತದಲ್ಲಿ ಅವರುಗಳು ಮನವಿ ಸಲ್ಲಿಸಿ, ತಾವುಗಳು ದೂರ ಶಿಕ್ಷಣ ನಿರ್ದೇಶನಾಲಯದಲ್ಲಿ ಬಹಳ ವರ್ಷಗಳಿಂದ ಸಂಶೋಧನಾ ಮತ್ತು ಬೋಧನ ಸಹಾಯಕರುಗಳಾಗಿ ಕಾರ್ಯ ನಿರ್ವಹಿಸಿದ್ದು, ಯು.ಜಿ.ಸಿ ವಿದ್ಯಾರ್ಹತೆ ಹಾಗೂ ಬೋಧನಾ ಅನುಭವ ಹೊಂದಿದ್ದೇವೆ. ಆದುದರಿಂದ, ಹಿಂದಿನ ಸೇವೆಯನ್ನು ಪರಿಗಣಿಸಿ ಅತಿಥಿ ಉಪನ್ಯಾಸಕರಾಗಿ ಮುಂದುವರೆಸುವಂತೆ ಕೋರಿರುತ್ತಾರೆ. ಅರ್ಜಿ ಸಲ್ಲಿಸಿದವರಲ್ಲಿ ಒಬ್ಬರು ಯು.ಜಿ.ಸಿ ವಿದ್ಯಾರ್ಹತೆ ಹೊಂದಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಸದರಿಯವರು ಸಲ್ಲಿಸಿರುವ ಮನವಿಯನ್ನು ಸಿಂಡಿಕೇಟ್ ಸಭೆಯ ನಿರ್ಣಯಕ್ಕಾಗಿ ಮಂಡಿಸಿದೆ ಎಂದರು.



ಕುಲಸಚಿವರು
ಕು.ವಿ./ ಜ್ಞಾನಸಹ್ಯಾದ್ರಿ

Scanned with OKEN Scanner

ಪ್ರೊ. ಕೆ. ಚಂದ್ರಶೇಖರ್‌ರವರು ಮಾತನಾಡಿ, ಬಹಳ ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಸಂಶೋಧನಾ ಮತ್ತು ಬೋಧನಾ ಸಹಾಯಕರುಗಳು ಯು.ಜಿ.ಸಿ. ನಿಗದಿಪಡಿಸಿರುವ ವಿದ್ಯಾರ್ಹತೆ ಹೊಂದಿದ್ದು, ಕೆಲವರು ಸರ್ಕಾರಿ ನೇಮಕಾತಿಯ ವಯೋಮಿತಿ ಮೀರಿದ್ದಾರೆ. ಈ ಹಿನ್ನೆಲೆಯಲ್ಲಿ, ಅವರಿಗೆ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಲು ಅವಕಾಶ ನೀಡಬೇಕು. ಅವರುಗಳನ್ನು ದೂರಶಿಕ್ಷಣ ನಿರ್ದೇಶನಾಲಯದ ಸೇವೆಯಿಂದ ದಿನಾಂಕ:30-11-2023ರಿಂದ ಅನ್ವಯವಾಗುವಂತೆ ಬಿಡುಗಡೆಗೊಳಿಸಿದ್ದಾಗ್ಯೂ, ಕೆಲವರು ಸಂಬಂಧಪಟ್ಟ ಸ್ನಾತಕೋತ್ತರ ಅಧ್ಯಯನ ವಿಭಾಗಗಳಲ್ಲಿ ಡಿಸೆಂಬರ್ ಮಾಹೆಯಿಂದಲೇ ಬೋಧನಾ ಕಾರ್ಯ ನಿರ್ವಹಿಸುತ್ತಿದ್ದು. ಅವರಿಗೆ ಅದೇ ದಿನಾಂಕದಿಂದ ಸಂಭಾವನೆ ಪಾವತಿಸಬೇಕೆಂದರು. ಎಲ್ಲಾ ಸದಸ್ಯರು ಇದಕ್ಕೆ ಧ್ವನಿಗೂಡಿಸಿದರು.

**ನಿರ್ಣಯ:** ಸುಧೀರ್ಘ ಚರ್ಚೆಯ ನಂತರ, ವಿಶ್ವವಿದ್ಯಾಲಯದ ದೂರಶಿಕ್ಷಣ ನಿರ್ದೇಶನಾಲಯದಲ್ಲಿ ಸಂಶೋಧನಾ ಮತ್ತು ಬೋಧನಾ ಸಹಾಯಕರಾಗಿ ಹಲವು ವರ್ಷಗಳಿಂದ ಕರ್ತವ್ಯ ನಿರ್ವಹಿಸಿರುವವರಿಗೆ ಇದೊಂದು ವಿಶೇಷ ಸಂದರ್ಭವೆಂದು ಪರಿಗಣಿಸಿ, ಸ್ನಾತಕೋತ್ತರ ವಿಭಾಗಗಳು ಅಥವಾ ಘಟಕ/ ನೇರ ಆಡಳಿತಕ್ಕೊಳಪಟ್ಟ ಕಾಲೇಜಿನಲ್ಲಿ ಲಭ್ಯವಿರುವ ಬೋಧನಾ ಕಾರ್ಯಭಾರವನ್ನು ಪರಿಗಣಿಸಿ ಅತಿಥಿ ಉಪನ್ಯಾಸಕರನ್ನಾಗಿ ನೇಮಕ ಮಾಡಲು ಹಾಗೂ ಬೋಧನಾ ಕಾರ್ಯಭಾರ ಇಲ್ಲದ ವಿಷಯದವರನ್ನು ಕಾಯ್ದಿರಿಸಿದ ಪಟ್ಟಿಯಲ್ಲಿ ಇಟ್ಟುಕೊಂಡು, ಮುಂದೆ ಪರಿಗಣಿಸುವಂತೆ ಸಭೆಯು ನಿರ್ಣಯಿಸಿತು. ವಿಶ್ವವಿದ್ಯಾಲಯದಲ್ಲಿ ಸಂಶೋಧನಾ ಮತ್ತು ಬೋಧನಾ ಸಹಾಯಕರಾಗಿ ಸಲ್ಲಿಸಿರುವ ಸೇವೆಯನ್ನು ದೂರಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರು ನೀಡುವ ಸೇವಾ ಪ್ರಮಾಣಪತ್ರ ಆಧರಿಸಿಕೊಂಡು ಸೇವಾನುಭವವನ್ನು ಸಂರಕ್ಷಿಸಲು ಹಾಗೂ ಸದರಿ ಸೇವಾ ಅನುಭವವನ್ನು ಅವರುಗಳಿಗೆ ಅತಿಥಿ ಉಪನ್ಯಾಸಕರ ಸಂಭಾವನೆ ನಿಗದೀಕರಣಕ್ಕೆ ಹಾಗೂ ಮುಂದಿನ ವರ್ಷಗಳಲ್ಲಿ ನಡೆಸುವ ಸಂದರ್ಶನದ ಸಮಯದಲ್ಲಿ ಸೇವಾ ಅನುಭವಕ್ಕೆ ಪರಿಗಣಿಸಬೇಕೆಂದು ಸರ್ವಾನುಮತದಿಂದ ನಿರ್ಣಯಿಸಿತು. ಮುಂದುವರೆದು, ದೂರಶಿಕ್ಷಣ ನಿರ್ದೇಶನಾಲಯದ ಸೇವೆಯಿದ ಬಿಡುಗಡೆಗೊಂಡ ನಂತರ ಪ್ರಸ್ತುತ ಸ್ನಾತಕೋತ್ತರ ವಿಭಾಗಗಳಲ್ಲಿ ಬೋಧನಾ ಕಾರ್ಯದಲ್ಲಿ ನಿರತರಾಗಿರುವವರಿಗೆ ಸಂಬಂಧಿಸಿದ ವಿಭಾಗಾಧ್ಯಕ್ಷರು ನೀಡುವ ಸೇವೆ ಮತ್ತು ಹಾಜರಾತಿ ದೃಢೀಕರಣ ಆಧರಿಸಿ, ಸೇವೆ ಸಲ್ಲಿಸುತ್ತಿರುವ ದಿನಾಂಕದಿಂದ ಸಂಭಾವನೆ ಪಾವತಿಸಲು ಸಭೆಯು ಅನುಮೋದನೆ ನೀಡಿತು.

**2024-ಸಿಂ-1.05** 2024-25ನೇ ಸಾಲಿನಲ್ಲಿ ವಯೋ ನಿವೃತ್ತಿ ಹೊಂದಲು ಅನುಮತಿ ನೀಡುವ ಬಗ್ಗೆ.

**ಚರ್ಚೆ:** ಕುಲಸಚಿವರು ಮಂಡಿಸಿದ ಏಪ್ರಿಲ್-2024 ರಿಂದ ಮಾರ್ಚ್-2025ನೇ ಆರ್ಥಿಕ ವರ್ಷಾಂತ್ಯದವರೆಗೆ ವಯೋನಿವೃತ್ತಿ ಹೊಂದಲಿರುವ ಈ ಕೆಳಕಂಡ ಅಧ್ಯಾಪಕ/ ಅಧ್ಯಾಪಕೇತರ ನೌಕರರುಗಳ ಪಟ್ಟಿಯನ್ನು ಸಭೆಯು ಅನುಮೋದಿಸಿತು.

| ಕ್ರ. ಸಂ. | ಹೆಸರು ಮತ್ತು ಹುದ್ದೆ ಡಾ/ಶ್ರೀ/ಶ್ರೀಮತಿ | ಜನ್ಮ ದಿನಾಂಕ | ಸೇವೆಗೆ ಸೇರಿದ ದಿನಾಂಕ | ನಿವೃತ್ತಿ ದಿನಾಂಕ: |
|---|---|---|---|---|
| | **ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗಗಳ ಅಧ್ಯಾಪಕರು** | | | |
| 1) | ಬಿ.ಹೆಚ್.ನಾಗ್ಯಾನಾಯ್ಕ್ , ಪ್ರಾಧ್ಯಾಪಕರು | 23-04-1962 | 02-07-1993 | 30-04-2024 |
| 2) | ಬಿ.ಎಸ್.ಬಿರಾದಾರ್, ಪ್ರಾಧ್ಯಾಪಕರು | 01-06-1962 | 05-08-1996 | 31-05-2024 |
| 3) | ರೇಚಲ್ ಕುರಿಯನ್ , ಪ್ರಾಧ್ಯಾಪಕರು | 15-10-1962 | 11-05-1998 | 31-10-2024 |
| 4) | ಚಂದ್ರಶೇಖರ್, ಕೆ, ಪ್ರಾಧ್ಯಾಪಕರು | 31-01-1963 | 16-07-1991 | 31-01-2025 |
| 5) | ಸರ್ವಮಂಗಳ, ಜಿ, ಪ್ರಾಧ್ಯಾಪಕರು | 03-02-1963 | 18-08-1994 | 28-02-2025 |
| | **ಸಹ್ಯಾದ್ರಿ ಕಲಾ ಕಾಲೇಜು** | | | |
| 1) | ಮಹೇಶ್ವರಪ್ಪ, ಸಹಾಯಕ ಪ್ರಾಧ್ಯಾಪಕರು | 01-06-1962 | 15-07-2009 | 31-05-2024 |
| 2) | ಟಿ.ಜಿ.ಚಂದ್ರಶೇಖರಪ್ಪ, ಸಹಾಯಕ ಪ್ರಾಧ್ಯಾಪಕರು | 11-05-1962 | 24-06-2013 | 31-05-2024 |
| | **ಸಹ್ಯಾದ್ರಿ ವಿಜ್ಞಾನ ಕಾಲೇಜು** | | | |
| 1) | ಮಲ್ಲಿಕಾರ್ಜುನ, ಎನ್., ಪ್ರಾಧ್ಯಾಪಕರು | 03-02-1963 | 22-05-1998 | 29-02-2025 |



ಕುಲಸಚಿವರು
ಕು.ವಿ./ ಜ್ಞಾನಸಹ್ಯಾದ್ರಿ

Scanned with OKEN Scanner

ಅಧ್ಯಾಪಕೇತರ ಅಧಿಕಾರಿ /ನೌಕರರು

| | | | | |
|---|---|---|---|---|
| 1) | ರೋಹಿದಾಸ್, ಆರ್.,<br>ಸಹಾಯಕ ಕುಲಸಚಿವರು | 12-04-1964 | 03-11-1989 | 30-04-2024 |
| 2) | ಭಾಗ್ಯ, ಸಿ.ಬಿ.,<br>ಪ್ರಥಮ ದರ್ಜೆ ಸಹಾಯಕರು | 04-04-1964 | 22-08-1995 | 30-04-2024 |
| 3) | ಬಸಪ್ಪ, ಎಂ. ಭೋವಿ.,<br>ಸಹಾಯಕ ಗ್ರಂಥಪಾಲಕರು (ಆಯ್ಕೆ ಶ್ರೇಣಿ) | 01-06-1964 | 22-08-1988 | 31-05-2024 |
| 4) | ಶ್ರೀನಿವಾಸಮೂರ್ತಿ, ಎನ್.ವಿ.,<br>ಪ್ರಥಮ ದರ್ಜೆ ಸಹಾಯಕರು | 16-05-1964 | 05-08-1994 | 31-05-2024 |
| 5) | ಸರೋಜ, ಎಂ., ಕಿರಿಯ ಸಹಾಯಕರು | 20-05-1964 | 03-01-1995 | 31-05-2024 |
| 6) | ಮಾಲಿನಿ, ಜಿ.ಆರ್., ಕಿರಿಯ ಸಹಾಯಕರು | 13-05-1964 | 19-01-2006 | 31-05-2024 |
| 7) | ಕೃಷ್ಣಮೂರ್ತಿ, ಎಸ್., ಅಟೆಂಡರ್ | 01-06-1964 | 05-01-1990 | 31-05-2024 |
| 8) | ಧನಸಿಂಗನಾಯ್ಕ್, ಹೆಚ್.ಪಿ.,<br>ಸಹಾಯಕ ಕುಲಸಚಿವರು | 01-07-1964 | 22-08-1994 | 30-06-2024 |
| 9) | ಶಕುಂತಲ, ಹೆಚ್.ವೈ., ಶಾಖಾಧಿಕಾರಿ | 25-06-1964 | 13-11-1989 | 30-06-2024 |
| 10) | ಶ್ರೀನಿವಾಸಮೂರ್ತಿ, ಟಿ.ಆರ್.,<br>ಕಿರಿಯ ಸಹಾಯಕರು | 17-06-1964 | 24-08-1995 | 30-06-2024 |
| 11) | ರಾಜಶೇಖರಪ್ಪ, ಎಸ್.ಬಿ.,<br>ಕಿರಿಯ ಸಹಾಯಕರು | 03-06-1964 | 19-01-2006 | 30-06-2024 |
| 12) | ಅಂಬಿಕ, ಎನ್.ಪಿ.,<br>ಸಹಾಯಕ ಕುಲಸಚಿವರು | 04-07-1964 | 02-11-1989 | 31-07-2024 |
| 13) | ಅನ್ನಪೂರ್ಣ, ಹೆಚ್.ಎ.,<br>ಕಿರಿಯ ಸಹಾಯಕರು | 30-07-1964 | 14-01-2011 | 31-07-2024 |
| 14) | ಅಮೀರ್, ಬಿ.ಎಂ., ವಾಹನ ಚಾಲಕರು | 04-07-1964 | 01-09-1993 | 31-07-2024 |
| 15) | ಸಂಪತ್, ಕಿರಿಯ ಸಹಾಯಕರು | 12-09-1964 | 05-07-1995 | 30-09-2024 |
| 16) | ಮಲ್ಲಪ್ಪ, ವೈ.ಪಿ.,<br>ಜವಾನ ಮತ್ತು ಕಾವಲುಗಾರ | 09-11-1964 | 08-05-1995 | 30-11-2024 |
| 17) | ಸಂಧ್ಯಾ, ಎಸ್.ಡಿ., ಶಾಖಾಧಿಕಾರಿ | 15-12-1964 | 31-10-1989 | 31-12-2024 |
| 18) | ಗಂಗನರಸ, ಅಟೆಂಡರ್ | 01-03-1965 | 17-01-2006 | 28-02-2025 |
| 19) | ಜೋಸೆಫ್, ಕಿರಿಯ ಸಹಾಯಕರು | 10-03-1965 | 28-01-2006 | 31-03-2025 |
| 20) | ಈರಣ್ಣ, ವಾಹನ ಚಾಲಕರು | 29-03-1965 | 19-01-2006 | 31-03-2025 |

**024-ಸಿಂ-1.05(ಎ)** ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಅತಿಥಿ ಉಪನ್ಯಾಸಕರ ಡಿಸೆಂಬರ್-2023ರ ಮಾಹೆಯ ಸಂಭಾವನೆಯನ್ನು ಪಾವತಿಸುವ ಕುರಿತು.

**ಚರ್ಚೆ:** ಕುಲಸಚಿವರು ಮಾತನಾಡುತ್ತಾ, 2023-24ನೇ ಸಾಲಿನ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಹೆಚ್ಚುವರಿ ಬೋಧನಾ ಕಾರ್ಯಭಾರ ನಿರ್ವಹಣೆಗಾಗಿ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಂಡಿದ್ದು, ಅವರಿಗೆ ದಿನಾಂಕ:02-01-2024ರಂದು ನೇಮಕಾತಿ ಆದೇಶ ನೀಡಿದೆ. ಆದರೆ, ವಿಶ್ವವಿದ್ಯಾಲಯದ ಶೈಕ್ಷಣಿಕ ವೇಳಾಪಟ್ಟಿಯ ಪ್ರಕಾರ ಸ್ನಾತಕೋತ್ತರ ತರಗತಿಗಳು ಡಿಸೆಂಬರ್-2023ರ ಮೊದಲ ವಾರದಿಂದಲೇ ಆರಂಭವಾಗಿದೆ. ಕೆಲವು ವಿಭಾಗಗಳಲ್ಲಿ ಖಾಯಂ ಅಧ್ಯಾಪಕರೇ ಇಲ್ಲ. ಇನ್ನೂ ಕೆಲವು ವಿಭಾಗಗಳಲ್ಲಿ ಖಾಯಂ ಅಧ್ಯಾಪಕರ ಕೊರತೆ ಇದೆ. ಈ ಹಿನ್ನೆಲೆಯಲ್ಲಿ ಕೆಲವು ವಿಭಾಗಗಳಲ್ಲಿ ಬೋಧನಾ ಕಾರ್ಯ ನಿರ್ವಹಣೆಗಾಗಿ ನೇಮಕಾತಿ ಆದೇಶ ನೀಡುವ ಮೊದಲೇ ಡಿಸೆಂಬರ್-2023ರಿಂದ ಅತಿಥಿ ಉಪನ್ಯಾಸಕರ ಸೇವೆಯನ್ನು ಬಳಸಿಕೊಂಡಿದ್ದು, ಅವರಿಗೆ ಅನುಮತಿ ನೀಡಿ ವೇತನ ಪಾವತಿಸಲು ಆದೇಶಿಸಬೇಕೆಂದು ಕೆಲ ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರು ಮನವಿ ಸಲ್ಲಿಸಿದ್ದಾರೆ. ಅಲ್ಲದೇ, ಘಟಕ/ನೇರ ಆಡಳಿತದ ಕಾಲೇಜುಗಳ ಅತಿಥಿ ಉಪನ್ಯಾಸಕರು ಕೂಡ ಮನವಿ ಸಲ್ಲಿಸಿ ಸ್ನಾತಕ ತರಗತಿಗಳು ಸೆಪ್ಟಂಬರ್-2023ರ ಮಾಹೆಯಿಂದಲೇ ಆರಂಭಗೊಂಡಿದ್ದು,



ಕುಲಸಚಿವರು

Scanned with OKEN Scanner

ಅಂದಿನಿಂದಲೇ ಬೋಧನಾ ಕಾರ್ಯದಲ್ಲಿ ನಿರತರಾಗಿದ್ದು, ನಮಗೆ, ನವೆಂಬರ್–2023ರಲ್ಲಿ ನೇಮಕಾತಿ ಆದೇಶ ನೀಡಿದ್ದಾರೆ. ಆದುದರಿಂದ, ನಮಗೆ ಸೆಪ್ಟಂಬರ್ ಮಾಹೆಯಿಂದ ಕರ್ತವ್ಯ ನಿರ್ವಹಿಸಿರುವ ಅವಧಿಯ ಸಂಭಾವನೆ ಪಾವತಿಸುವಂತೆ ಮನವಿ ಮಾಡಿದ್ದಾರೆ. ಇದನ್ನು ಸಭೆಗೆ ಮಂಡಿಸಿದೆ ಎಂದರು. ಸದಸ್ಯರಾದ ಶ್ರೀ ಶಶಿಧರ, ಬಿ.ಎನ್.,ರವರು ಮಾತನಾಡಿ, ಅವರು ಬೋಧನಾ ಕೆಲಸ ಮಾಡಿದ್ದಲ್ಲಿ ಅವರಿಗೆ ಸಂಭಾವನೆ ಪಾವತಿಸುವುದು ಅವಶ್ಯ ಎಂದರು. ಉಳಿದ ಸದಸ್ಯರು ಕೂಡ ಧ್ವನಿಗೂಡಿಸಿದರು.

**ನಿರ್ಣಯ:** ಸುಧೀರ್ಘ ಚರ್ಚೆಯ ನಂತರ, ಸ್ನಾತಕೋತ್ತರ ವಿಭಾಗಗಳಲ್ಲಿ ಡಿಸೆಂಬರ್–2023ರ ಮಾಹೆಯಲ್ಲಿ ಕರ್ತವ್ಯ ನಿರ್ವಹಿಸಿರುವ ಅತಿಥಿ ಉಪನ್ಯಾಸಕರಿಗೆ ವಿಭಾಗಾಧ್ಯಕ್ಷರ ಹಾಜರಾತಿ ದೃಢೀಕರಣ ಆಧರಿಸಿ ಹಾಗೂ ಘಟಕ/ ನೇರ ಆಡಳಿತದ ಕಾಲೇಜುಗಳಲ್ಲಿ ಸೆಪ್ಟಂಬರ್–2023ರ ಮಾಹೆಯಿಂದ ಕಾರ್ಯ ನಿರ್ವಹಿಸಿರುವವರಿಗೆ ಪ್ರಾಂಶುಪಾಲರು ನೀಡುವ ಹಾಜರಾತಿ ದೃಢೀಕರಣ ಆಧರಿಸಿ, ಕರ್ತವ್ಯ ನಿರ್ವಹಿಸಿರುವ ಅವಧಿಯ ಸಂಭಾವನೆಯನ್ನು 2023–24ನೇ ಸಾಲಿನ ನೇಮಕಾತಿ ಆದೇಶದಲ್ಲಿ ನಿಗದಿಪಡಿಸಿರುವ ದರದಲ್ಲಿ ಪಾವತಿಸಲು ಸಭೆಯು ಅನುಮೋದಿಸಿತು.

**2024–ಸಿಂ–1.05(ಬಿ)** 04 ಜನ ವಾಹನ ಚಾಲಕರಿಗೆ ಕಳೆದ 5 ತಿಂಗಳ ವೇತನವನ್ನು ಪಾವತಿಸುವ ಕುರಿತು.

**ಚರ್ಚೆ:** ಕುಲಸಚಿವರು ಮಾಹಿತಿ ನೀಡುತ್ತಾ, ವಿಶ್ವವಿದ್ಯಾಲಯದಲ್ಲಿ 04ಜನ ವಾಹನ ಚಾಲಕರನ್ನು ಸಂಚಿತ ವೇತನದ ಆಧಾರದಲ್ಲಿ ಹಂಗಾಮಿಯಾಗಿ ಈ ಹಿಂದೆ ನೇಮಕ ಮಾಡಿಕೊಂಡಿದ್ದು, ಅವರ ಹಂಗಾಮಿ ನೇಮಕದ ಅವಧಿಯು ದಿನಾಂಕ:26–08–2023ಕ್ಕೆ ಮುಗಿದಿದ್ದು, ಆಡಿಟ್ ಆಕ್ಷೇಪಣೆಯ ಹಿನ್ನೆಲೆಯಲ್ಲಿ ಅವರಿಗೆ ಪುನರ್‌ನೇಮಕದ ಆದೇಶ ನೀಡಿಲ್ಲ. ಆದಾಗ್ಯೂ ಅವರು ಸೇವೆ ಸಲ್ಲಿಸುತ್ತಿದ್ದು, ಅಲ್ಲಿಂದ ವೇತನ ಪಾವತಿಸಿಲ್ಲ. ಅವರು ಸೇವೆಯಲ್ಲಿ ಮುಂದುವರಿಸುವಂತೆ ಮನವಿ ಸಲ್ಲಿಸಿದ್ದು, ವಿಷಯವನ್ನು ಸಭೆಯ ನಿರ್ಣಯಕ್ಕೆ ಮಂಡಿಸಿದೆ ಎಂದರು. ಸದಸ್ಯರಾದ ಡಾ.ಅನಂತ, ಎಸ್., ರವರು ಮಾತನಾಡಿ, ವಾಹನ ಚಾಲಕರು ಹಂಗಾಮಿಯಾಗಿ ಬಹಳ ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಅವರ ಸೇವೆಯು ವಿಶ್ವವಿದ್ಯಾಲಯಕ್ಕೆ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ಅವರನ್ನು ಹಂಗಾಮಿ ನೌಕರರಾಗಿ ಮುಂದುವರೆಸುವ ಅಗತ್ಯವಿದೆ ಎಂದರು. ಸದಸ್ಯರಾದ ಶ್ರೀ ಶಶಿಧರ, ಬಿ.ಎನ್.ರವರು ಮಾತನಾಡಿ, ಅವರಿಗೆ ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲದಿಂದ ವೇತನ ಪಾವತಿಸಲಾಗುತ್ತಿದೆ. ಆದುದರಿಂದ, ಆಡಿಟ್ ಆಕ್ಷೇಪಣೆಗಳಿಗೆ ಸೂಕ್ತ ಸಮಜಾಯಿಷಿ ನೀಡಿ, ಚಾಲಕರ ಸೇವೆಯ ಅವಶ್ಯಕತೆಯ ಬಗ್ಗೆ ಮನವರಿಕೆ ಮಾಡಿ, ಆಕ್ಷೇಪಣೆ ಕೈಬಿಡುವಂತೆ ಸೂಚಿಸಬಹುದು. ರಾಜ್ಯದ ಬಹಳಷ್ಟು ವಿಶ್ವವಿದ್ಯಾಲಯಗಳಲ್ಲಿ ವಾಹನ ಚಾಲಕರನ್ನು ಹಂಗಾಮಿಯಾಗಿ ನೇಮಕ ಮಾಡಿಕೊಂಡಿದ್ದಾರೆ. ಆದುದರಿಂದ, ಅವರನ್ನು ಹಂಗಾಮಿಯಾಗಿ ಮುಂದುವರಿಸುವುದು ಅಗತ್ಯ ಎಂದರು. ಮಾನ್ಯ ಕುಲಪತಿಯವರು ಮಾತನಾಡಿ, ಹಂಗಾಮಿ ವಾಹನ ಚಾಲಕರು ಬಹಳ ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದು, ಅವರಿಂದ ಸೇವಾನ್ಯೂನತೆ ಕೂಡ ಆಗಿರುವುದಿಲ್ಲ. ಅಗತ್ಯ ಸೇವೆಯ ವ್ಯಾಪ್ತಿಯಲ್ಲಿರುವ ಅವರುಗಳನ್ನು ಮುಂದುವರಿಸುವುದು ಅಗತ್ಯ ಎಂದರು. ಕುಲಸಚಿವ (ಮೌಲ್ಯಮಾಪನ) ರವರು ಮಾತನಾಡಿ ಚಾಲಕರನ್ನು ಹಂಗಾಮಿಯಾಗಿ 6 ತಿಂಗಳಿಗೆ ಬದಲಾಗಿ 11 ತಿಂಗಳ ಅವಧಿಗೆ ನೇಮಕ ಮಾಡುವುದು ಉತ್ತಮ ಎಂದರು. ವಾಹನ ಚಾಲಕರ ಪುನರ್‌ನೇಮಕದ ಬಗ್ಗೆ ಎಲ್ಲಾ ಸದಸ್ಯರು ಸಹಮತ ವ್ಯಕ್ತಪಡಿಸಿದರು.

**ನಿರ್ಣಯ:** ಸುಧೀರ್ಘ ಚರ್ಚೆಯ ನಂತರ, ವಾಹನ ಚಾಲಕರ ಸೇವೆಯು ವಿಶ್ವವಿದ್ಯಾಲಯಕ್ಕೆ ಅಗತ್ಯವಿರುವುದರಿಂದ, ಅವರ ಹಿಂದಿನ ಸೇವೆಯನ್ನು ಪರಿಗಣಿಸಿಕೊಂಡು, ಅವರುಗಳನ್ನು ದಿನಾಂಕ:27–08–2023ರಿಂದ ಅನ್ವಯವಾಗುವಂತೆ 11 ತಿಂಗಳುಗಳ ಅವಧಿಗೆ ಪ್ರಸ್ತುತ ಪಡೆಯುತ್ತಿರುವ ಕ್ರೋಢೀಕೃತ ವೇತನದಲ್ಲಿ ಹಂಗಾಮಿ ಸೇವೆಯಲ್ಲಿ ಪುನರ್ ನೇಮಕ ಮಾಡಲು ಸಭೆಯು ನಿರ್ಣಯಿಸಿತು.

## ಅಭಿವೃದ್ಧಿ ವಿಭಾಗ

**2024–ಸಿಂ–1.08** ಸಂಶೋಧನಾ ಅಭ್ಯರ್ಥಿಗಳು ಸಂಶೋಧನೆಗಾಗಿ ತೈವಾನ್‌ಗೆ ತೆರಳಲು ಅನುಮತಿ ನೀಡುವ ಕುರಿತು.

**ಚರ್ಚೆ:** ಕುಲಸಚಿವರು ಮಾತನಾಡುತ್ತಾ, ವಿಶ್ವವಿದ್ಯಾಲಯದ ಸ್ನಾತಕೋತ್ತರ ಔದ್ಯೋಗಿಕ ರಸಾಯನಶಾಸ್ತ್ರ



ಕುಲಸಚಿವರು

Scanned with OKEN Scanner

ಅಧ್ಯಯನ ಮತ್ತು ಸಂಶೋಧನಾ ವಿಭಾಗದಲ್ಲಿನ ಪ್ರಾಧ್ಯಾಪಕರಾದ ಪ್ರೊ. ಬಿ.ಇ. ಕುಮಾರಸ್ವಾಮಿರವರ ಮಾರ್ಗದರ್ಶನದಲ್ಲಿ ಪಿಹೆಚ್.ಡಿ., ಸಂಶೋಧನೆ ನಡೆಸುತ್ತಿರುವ ಕು.ರಾಜೇಶ್ವರಿ ಎಮ್ಮಿ ಮತ್ತು ಕು.ಧೃತಿ.ಹೆಚ್.ಆರ್–ಇವರುಗಳು Taiwan Experience Education Program (TEEP)ಅಡಿಯಲ್ಲಿ Intership Program ಆಗಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಪ್ರೊ. ಮಣಿ ಗೋವಿಂದಸ್ವಾಮಿ ಇವರ ಮಾರ್ಗದರ್ಶನದಲ್ಲಿ ಸಂಶೋಧನೆಗಾಗಿ ದಿನಾಂಕ:15–03–2024ರಿಂದ 15–09–2024ರವರೆಗೆ ತೈವಾನ್‌ಗೆ ತೆರಳಲು ಅನುಮತಿ ನೀಡುವಂತೆ ಕೋರಿರುತ್ತಾರೆ. ಸದರಿ ಸಂಶೋಧನಾರ್ಥಿಗಳ ಎಲ್ಲಾ ಖರ್ಚುವೆಚ್ಚಗಳನ್ನು ತೈವಾನ್‌ನ ಮಿಂಗ್‌ಚಿ ವಿಶ್ವವಿದ್ಯಾಲಯವೇ ಭರಿಸುತ್ತಿರುವುದರಿಂದ ಕುವೆಂಪು ವಿಶ್ವವಿದ್ಯಾಲಯಕ್ಕೆ ಯಾವುದೇ ಆರ್ಥಿಕ ಹೊರೆಯಾಗುವುದಿಲ್ಲ. ಆದುದರಿಂದ ಸಂಶೋಧನಾರ್ಥಿಗಳು ತೈವಾನ್‌ಗೆ ಹೋಗಿಬರಲು ಅನುತಿಗಾಗಿ ಮಂಡಿಸಿದೆ ಎಂದರು.

**ನಿರ್ಣಯ:** ಚರ್ಚೆಯ ನಂತರ ಸ್ನಾತಕೋತ್ತರ ಔದ್ಯೋಗಿಕ ರಸಾಯನಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಇಬ್ಬರು ಪಿಹೆಚ್.ಡಿ., ಸಂಶೋಧಕರಾದ ಕು.ರಾಜೇಶ್ವರಿ ಎಮ್ಮಿ ಮತ್ತು ಕು.ಧೃತಿ.ಹೆಚ್.ಆರ್–ಇವರುಗಳು Taiwan Experience Education Program (TEEP)ಅಡಿಯಲ್ಲಿ Intership Program ಗಾಗಿ ತೈವಾನ್‌ನ ಮಿಂಗ್‌ಚಿ ವಿಶ್ವವಿದ್ಯಾಲಯಕ್ಕೆ ದಿನಾಂಕ:15–03–2024 ರಿಂದ 15–09–2024ರವರೆಗೆ ಹೋಗಿಬರಲು ಅನುಮೋದನೆ ನೀಡಲಾಯಿತು.

**2024–ಸಿಂ–1.09** ಡಾ. ಶ್ರೀಶೈಲ, ಸಹಾಯಕ ಪ್ರಾಧ್ಯಾಪಕರು, ಸ್ನಾತಕೋತ್ತರ ಅನ್ವಯಿಕ ಸಸ್ಯಶಾಸ್ತ್ರ ಅಧ್ಯಯನ ವಿಭಾಗ –ಇವರು ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಪ್ರಬಂಧ ಮಂಡನೆಗೆ ಭಾಗವಹಿಸಲು ಅನುಮೋದನೆ ನೀಡುವ ಕುರಿತು.

ಸ್ನಾತಕೋತ್ತರ ಅನ್ವಯಿಕ ಸಸ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಡಾ. ಶ್ರೀಶೈಲ–ಇವರು ದಿನಾಂಕ: 25–03–2024 ರಿಂದ 27–03–2024 ರವರೆಗೆ ಸಿಂಗಾಪುರ ದೇಶದಲ್ಲಿ ನಡೆಯುವ 8$^{TH}$ EDITION OF GLOBAL CONGRESS ON PLANT BIOLOGY AND BIOTECHNOLOGY ದಲ್ಲಿ ನಡೆಯುವ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಪ್ರಬಂಧ ಮಂಡಿಸುವ ಸಲುವಾಗಿ ಹೋಗಿಬರಲು ಅನುಮತಿಸಿದ ಸಭೆಯು, ಪ್ರಯಾಣದ ದಿನಗಳು ಸೇರಿದಂತೆ ದಿನಾಂಕ: 25–03–2024ರಿಂದ 27–03–2024 ರವರೆಗೆ ಅನ್ಯಕಾರ್ಯ ನಿಮಿತ್ತ (OOD) ಪರಿಗಣಿಸಲು ಹಾಗೂ ಪ್ರಯಾಣ/ ದಿನಭತ್ಯೆ ಮತ್ತು ನೋಂದಣಿ ಶುಲ್ಕ ಶೇ.50ರಷ್ಟು ಅಥವಾ $ 200, ಇವುಗಳಲ್ಲಿ ಯಾವುದು ಕಡಿಮೆಯೋ ಅದನ್ನು ಪಾವತಿಸಲು ಮಂಜೂರಾತಿ ನೀಡಲು ನಿರ್ಣಯಿಸಿತು.

**2024–ಸಿಂ–1.06:** ಸದಸ್ಯರು ಮಂಡಿಸಿದ ಪ್ರಸ್ತಾವನೆಗಳು:

**2024–ಸಿಂ–1.06(ಎ)** **ಪ್ರೊ. ಕೆ. ಚಂದ್ರಶೇಖರ್**

(1) Establishment of Center for Gandhian Studies and Research ಬಗ್ಗೆ ನಾನು ಸಲ್ಲಿಸಿರುವ ಪ್ರಸ್ತಾವನೆ ಹಿಂದಿನ ಸಭೆಯಲ್ಲಿ ಅನುಮೋದನೆಗೊಂಡಿರುತ್ತದೆ. ಆದರೆ ಇದನ್ನು ಸ್ಥಾಪಿಸುವ ಬಗ್ಗೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ದಾಖಲೆ ಸಹಿತ ಮಾಹಿತಿ ನೀಡಿ ಎಂದರು.

ಕುಲಸಚಿವರು ಮಾಹಿತಿ ನೀಡುತ್ತಾ, ದಿನಾಂಕ:27–07–2023ರಂದು ನಡೆದ ಸಿಂಡಿಕೇಟ್ ಸಭೆಯ ನಡಾವಳಿ ಪ್ರತಿ ಸಂಬಂಧಪಟ್ಟ ವಿಭಾಗಕ್ಕೆ ತಲುಪಿಲ್ಲವಾದ್ದರಿಂದ ಕ್ರಮ ವಹಿಸಿಲ್ಲ ಎಂದರು. ಮಾನ್ಯ ಕುಲಪತಿಯವರು ಮಾತನಾಡುತ್ತಾ, ಅಧ್ಯಯನ ಪೀಠಗಳ ಸ್ಥಾಪನೆ ಕುರಿತಂತೆ ಸಲ್ಲಿಸಲಾಗಿದ್ದ



ಕುಲಸಚಿವರು

Scanned with OKEN Scanner

ವಿನಿಯಮಗಳು ಸರ್ಕಾರದಿಂದ ಹಿಂದಿರುಗಿ ಬಂದಿದ್ದು, ಅನುದಾನಕ್ಕಾಗಿ ಇಂತಹ ಪ್ರಸ್ತಾವನೆಗಳನ್ನು ಸಲ್ಲಿಸದಂತೆ ತಿಳಿಸಿದ್ದಾರೆ. ಆದಾಗ್ಯೂ, ಗಾಂಧಿ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ ಸ್ಥಾಪಿಸುವ ಬಗ್ಗೆ ಪ್ರೊ.ಚಂದ್ರಶೇಖರ್‌ರವರು ವಿವರವಾದ ಪ್ರಸ್ತಾವನೆ ಸಲ್ಲಿಸಿದಲ್ಲಿ ಸಕ್ಷಮ ಪ್ರಾಧಿಕಾರಗಳ ಅನುಮೋದನೆ ಪಡೆದು ಸರ್ಕಾರಕ್ಕೆ ಇನ್ನೊಮ್ಮೆ ಸಲ್ಲಿಸುವುದಾಗಿ ತಿಳಿಸಿದರು.

(2) ಗ್ರಾಮಪಂಚಾಯಿತಿಗಳನ್ನು ದತ್ತು ತೆಗೆದುಕೊಳ್ಳಲು ನಾನು ಸಿದ್ಧಪಡಿಸಿದ್ದ ಪ್ರಸ್ತಾವನೆಗಳು ಮತ್ತು ಮಾರ್ಗಸೂಚಿಗಳು ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆಗೊಂಡಿರುತ್ತದೆ. ಆದರೆ, ಅದರ ಅನುಷ್ಠಾನದ ಬಗ್ಗೆ ಏಕೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ ಎಂಬುದಕ್ಕೆ ಮಾಹಿತಿಯನ್ನು ಒದಗಿಸಿ ಎಂದರು.

ಈ ಕುರಿತಾಗಿ ಕುಲಸಚಿವರು ಮಾಹಿತಿ ನೀಡುತ್ತಾ, ದಿನಾಂಕ:27–07–2023ರಂದು ನಡೆದ ಸಿಂಡಿಕೇಟ್ ಸಭೆಯ ನಡಾವಳಿ ಸಂಬಂಧಪಟ್ಟ ವಿಭಾಗಕ್ಕೆ ತಲುಪಿಲ್ಲ. ಈ ಬಗ್ಗೆ ನಡಾವಳಿಗಳಲ್ಲಿನ ನಿರ್ಣಯಗಳನ್ನು ಪರಿಶೀಲಿಸಿ ಕ್ರಮವಹಿಸುವುದಾಗಿ ತಿಳಿಸಿದರು.

(3) ದೂರಶಿಕ್ಷಣ ನಿರ್ದೇಶನಾಲಯ ವಿಭಾಗದಿಂದ ಪ್ರತಿ ವರ್ಷ ವಿಶ್ವವಿದ್ಯಾಲಯಕ್ಕೆ ಆಗುತ್ತಿರುವ ಲಾಭ ಮತ್ತು ನಷ್ಟದ ಬಗ್ಗೆ ದಾಖಲೆ ಸಹಿತ ಮಾಹಿತಿ ನೀಡಿ.

ಸಭೆಯಲ್ಲಿ ವಿಶೇಷ ಆಹ್ವಾನಿತರಾಗಿದ್ದ ಹಣಕಾಸು ಅಧಿಕಾರಿಗಳು ಲಿಖಿತ ದಾಖಲೆಗಳನ್ನು ಒದಗಿಸಿ, ಅದನ್ನು ಸದಸ್ಯರಿಗೆ ವಿವರಿಸಿದರು.

(4) ಬೋಧಕರ ಖಾಲಿ ಹುದ್ದೆಗಳಿಗೆ ಅತಿಥಿ ಉಪನ್ಯಾಸಕರನ್ನು ಮತ್ತು ಬೋಧಕೇತರ ಖಾಲಿ ಹುದ್ದೆಗಳಿಗೆ ಹೊರಗುತ್ತಿಗೆ ನೌಕರರನ್ನೇ ನೇಮಕ ಮಾಡಿಕೊಳ್ಳಲು ಸರ್ಕಾರದ ಪೂರ್ವಾನುಮತಿಯನ್ನು ಪಡೆದಿರುವ ಬಗ್ಗೆ ಹಾಗೂ ಸದರಿಯವರ ವೇತನ ಅನುದಾನ ಪಡೆಯುತ್ತಿರುವ ಬಗ್ಗೆ ಸೂಕ್ತ ದಾಖಲೆ ಸಹಿತ ಮಾಹಿತಿ ನೀಡಿ.

ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗಗಳು ಹಾಗೂ ಘಟಕ/ನೇರ ಆಡಳಿತಕ್ಕೊಳಪಟ್ಟ ಕಾಲೇಜುಗಳಲ್ಲಿನ ಹೆಚ್ಚುವರಿ ಬೋಧನಾ ಕಾರ್ಯಭಾರದ ನಿರ್ವಹಣೆಗಾಗಿ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳಲು ಹಾಗೂ ಅವರ ವೇತನಕ್ಕಾಗಿ ಅನುದಾನ ನೀಡುವಂತೆ ಸರ್ಕಾರಕ್ಕೆ ದಿನಾಂಕ:06–11–2023ರಂದು ಹಾಗೂ ಮಂಜೂರಾದ ಅಧ್ಯಾಪಕೇತರ ಹುದ್ದೆಗಳಲ್ಲಿ ಖಾಲಿ ಇರುವ ಹುದ್ದೆಗಳ ಸ್ಥಾನಗಳಿಗೆ ಹೊರಗುತ್ತಿಗೆ ಮೂಲಕ ಸಿಬ್ಬಂದಿಯ ಸೇವೆ ಪಡೆಯಲು ಅನುಮೋದನೆಗಾಗಿ ದಿನಾಂಕ:20–07–2023ರಂದು ಬರೆದ ಪತ್ರಗಳ ಪ್ರತಿಯನ್ನು ಸದಸ್ಯರಿಗೆ ಒದಗಿಸಲಾಯಿತು.

**2024–ಸಿಂ–1.06(ಬಿ)** **ಶ್ರೀ ಶಾಂತಕುಮಾರ್, ಜಿ.ಎಸ್.,**

(1) Regarding Guest Faculty Salary Slab
ಇದರ ಕುರಿತಾಗಿ ವಿಷಯ ಸಂಖ್ಯೆ:2024–ಸಿಂ–1.03 ರಲ್ಲಿ ನಿರ್ಣಯವಾಗಿರುವುದನ್ನು ಸದಸ್ಯರ ಗಮನಕ್ಕೆ ತರಲಾಯಿತು.

(2) 2018–19ನೇ ಸಾಲಿನ (ಡಬಲ್ ಡ್ಯುರೇಷನ್) ವಿದ್ಯಾರ್ಥಿಗಳಿಗೆ ಪುನ: ಪರೀಕ್ಷೆ ಕೊಡುವುದರ ಬಗ್ಗೆ.
ಇದರ ಕುರಿತಾಗಿ ವಿಷಯ ಸಂಖ್ಯೆ:2024–ಸಿಂ–1.02 ರಲ್ಲಿ ನಿರ್ಣಯವಾಗಿರುವುದನ್ನು ಸದಸ್ಯರ ಗಮನಕ್ಕೆ ತರಲಾಯಿತು.

**2024–ಸಿಂ–1.06(ಬಿ)** **ಶ್ರೀ ಶಶಿಧರ್, ಬಿ.ಎನ್.,**

(1) ಸ್ಮಾರ್ಟ್‌ಕ್ಲಾಸ್ ಪ್ರಾಜೆಕ್ಟ್‌ಗೆ ಸಂಬಂಧಿಸಿದಂತೆ, ಕಂಪನಿಯೊಂದಗಿನ ಒಡಂಬಡಿಕೆ, ಸರ್ಕಾರದಿಂದ ಮಂಜೂರಾದ ಮೊತ್ತದ ವಿವರ, ಕಂಪನಿ ಇದುವರೆವಿಗೂ ಮಾಡಿರುವ ಪ್ರಗತಿ, ಇದಕ್ಕೆ ಸಂಬಂಧಪಟ್ಟಂತೆ ರಚಿಸಲಾದ ತನಿಖಾ ತಂಡದ ಮಾಹಿತಿ ಹಾಗೂ ವರದಿಯ ವಿವರ.

ಸದಸ್ಯರಿಗೆ ಮಾಹಿತಿಗಳನ್ನು ಒದಗಿಸಲಾಯಿತು. ಪ್ರಸ್ತುತ ಪ್ರಕರಣವು ನ್ಯಾಯಾಲಯದ



ಕುಲಸಚಿವರು
ಕು.ವಿ./ ಜ್ಞಾನಸಹ್ಯಾದ್ರಿ

Scanned with OKEN Scanner

ಹಂತದಲ್ಲಿರುವುದರಿಂದ ಸಭೆಯಲ್ಲಿ ಚರ್ಚಿಸುವುದು ಬೇಡ ಎಂದು ನಿರ್ಣಯಿಸಲಾಯಿತು.

(2) ಲಾಜಿಸಿಸ್ ಕಂಪನಿಗೆ ಸಂಬಂಧಪಟ್ಟ ಒಡಂಬಡಿಕೆ, ಪ್ರಸುತ ಕಂಪನಿಯು ಕಾರ್ಯವೈಖರಿ ಸದರಿ ಕಂಪನಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರ ಸಂಖ್ಯೆ ಕಳೆದ ಒಂದು ವರ್ಷ ಅವಧಿಯಲ್ಲಿ ವಿಶ್ವವಿದ್ಯಾಲಯದಿಂದ ಲಾಜಿಸಿಸ್ ಕಂಪನಿಗೆ ನೀಡಲಾದ ಮೊತ್ತದ ವಿವರ.

ಇದರ ಕುರಿತಾಗಿ ಲಿಖಿತ ಮಾಹಿತಿಗಳನ್ನು ಸದಸ್ಯರಿಗೆ ಒದಗಿಸಿ ಮಾತನಾಡಿದ ಕುಲಸಚಿವ (ಮೌಲ್ಯಮಾಪನ) ರವರು ಎನ್.ಇ.ಪಿ. ಜಾರಿಗೆ ಬಂದ ನಂತರ ಎಲ್ಲಾ ಪರೀಕ್ಷಾ ಕಾರ್ಯಗಳನ್ನು ಯು.ಸಿ.ಸಿ.ಎಂ.ಎಸ್. ಮೂಲಕ ನಿರ್ವಹಿಸುತ್ತಿದ್ದು, ನಾನ್ ಎನ್.ಇ.ಪಿ., ಪರೀಕ್ಷಾ ಕಾರ್ಯಗಳಿಗೆ ಮಾತ್ರ ಲಾಜಿಸಿಸ್ ಸೇವೆ ಪಡೆದುಕೊಳ್ಳಲಾಗಿದೆ. ಪ್ರಸ್ತುತ ಅವರೊಂದಿಗಿನ ಕರಾರು ಒಪ್ಪಂದವನ್ನು ನವೀಕರಿಸಿಲ್ಲ. ಅವರಿಂದ ವಿಶ್ವವಿದ್ಯಾಲಯಕ್ಕೆ ಸಂಬಂಧಪಟ್ಟ ಎಲ್ಲಾ ಡಾಟಾಗಳನ್ನು ಪಡೆದುಕೊಳ್ಳಲಾಗುವುದು ಎಂದರು.

(3) ಕಳೆದ ಶೈಕ್ಷಣಿಕ ವರ್ಷದಲ್ಲಿ ಎಸ್.ಸಿ.ಪಿ./ಟಿ.ಎಸ್.ಪಿ. ಅಡಿಯಲ್ಲಿ ಮಂಜೂರಾದ ಮೊತ್ತದ ವಿವರ ಹಾಗೂ ಈ ಯೋಜನೆಯ ಸದ್ಬಳಕೆಯ ವಿವರ.

ಕುಲಸಚಿವರು ಮಾಹಿತಿ ನೀಡುತ್ತಾ, ಕಳೆದ ಶೈಕ್ಷಣಿಕ ವರ್ಷದಲ್ಲಿ ಎಸ್.ಸಿ.ಪಿ./ಟಿ.ಎಸ್.ಪಿ. ಅಡಿಯಲ್ಲಿ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಇ.ಬಿ.ಎಲ್., ಪಿಹೆಚ್.ಡಿ. ವಿದ್ಯಾರ್ಥಿಗಳ ಶಿಷ್ಯವೇತನ ಹಾಗೂ ಶುಲ್ಕ ಮರುಪಾವತಿ ಉದ್ದೇಶಕ್ಕಾಗಿ ಮಾತ್ರ ರೂ.12.00ಲಕ್ಷಗಳು ಬಿಡುಗಡೆಯಾಗಿದ್ದು, ಪೂರ್ಣ ಮೊಬಲಗನ್ನು ವಿದ್ಯಾರ್ಥಿಗಳಿಗೆ ಪಾವತಿಸಿದೆ ಎಂದರು.

**2024–ಸಿಂ–1.07: ಸರ್ಕಾರದಿಂದ ಬಂದ ಪತ್ರಗಳು/ ರಹಸ್ಯ ವರದಿಗಳ ಮಂಡನೆ**

ಸರ್ಕಾರದ ಅಧೀನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯ–1) ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿ ಕಟ್ಟಡ, ಬೆಂಗಳೂರು ಇವರ ಪತ್ರ ಸಂಖ್ಯೆ: ಇಡಿ 94 ಯುಎಸ್‌ವಿ 2022 ದಿನಾಂಕ: 17–01–2024 ರ ಪತ್ರ.

ಕುಲಸಚಿವರು ಮಾತನಾಡಿ, ವಿಶ್ವವಿದ್ಯಾಲಯವು ಸಿದ್ಧಪಡಿಸಿ ಪ್ರಾಧಿಕಾರಗಳ ಅನುಮೋದನೆಯೊಂದಿಗೆ ಸರ್ಕಾರಕ್ಕೆ ಸಲ್ಲಿಸಿದ್ದ THE STATUTES RELATING TO APPOINTMENT AND PROMOTION OF TEACHERS AND OTHER ACADEMIC STAFF AND MEASURES FOR THE MAINTENANCE OF STANDARDS IN HIGHER EDUCATION IN THE KUVEMPU UNIVERSITY, AS PER THE UGC REGULATIONS 2018ರ ಪರಿನಿಯಮಕ್ಕೆ ಘನತೆವೆತ್ತ ರಾಜ್ಯಪಾಲರು ಹಾಗೂ ಕುಲಾಧಿಪತಿಗಳು ದಿನಾಂಕ:11–01–2024 ರಂದು ಅಂಕಿತ ನೀಡಿದ್ದು, ಇದನ್ನು ಸರ್ಕಾರವು ಪತ್ರ ಸಂಖ್ಯೆ:ಇಡಿ 94 ಯುಎಸ್‌ವಿ 2022, ದಿನಾಂಕ:17–01–2024ರ ಪತ್ರದ ಮೂಲಕ ವಿಶ್ವವಿದ್ಯಾಲಯಕ್ಕೆ ಕಳುಹಿಸಿರುವುದನ್ನು ಸಭೆಯ ಗಮನಕ್ಕೆ ತಂದರು.

**2024–ಸಿಂ–1.08: ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯುಗಳು**

**2024–ಸಿಂ–1.08(ಎ):** ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡಿ, ಯು.ಯು.ಸಿ.ಎಂ.ಎಸ್. ಸಮಸ್ಯೆಯಿಂದ ಪರೀಕ್ಷಾ ದಿನಾಂಕಗಳನ್ನು ಮುಂದೂಡಲಾಗಿದೆ. ಪರೀಕ್ಷೆಗಳು ಏಪ್ರಿಲ್–5ಕ್ಕೆ ಮುಗಿಯಲಿದ್ದು, ತರಗತಿಗಳನ್ನು ಏಪ್ರಿಲ್–6ರಿಂದ ಆರಂಭಿಸುವ ಸಲುವಾಗಿ ಶೈಕ್ಷಣಿಕ ವೇಳಾಪಟ್ಟಿಯನ್ನು ಪರಿಷ್ಕರಿಸುವಂತೆ ಕೋರಿದರು.

ಡಾ.ಅನಂತ, ಎಸ್., ರವರು ಮಾತನಾಡಿ, ರಾಜ್ಯದ ಕೆಲವು ವಿಶ್ವವಿದ್ಯಾಲಯಗಳಲ್ಲಿ ಈಗಾಗಲೇ ತರಗತಿಗಳನ್ನು ಆರಂಭಿಸಲಾಗಿದೆ. ನಮ್ಮಲ್ಲಿ ಇನ್ನೂ ಪರೀಕ್ಷೆಗಳು ಆರಂಭವಾಗಿಲ್ಲ. ಶೈಕ್ಷಣಿಕ ವೇಳಾಪಟ್ಟಿಯನ್ನು ಮುಂದೂಡುತ್ತಾ ಹೋದಲ್ಲಿ ಮುಂದಿನ ವರ್ಷದ ಪ್ರವೇಶಗಳಿಗೆ ತೊಂದರೆಯಾಗುತ್ತದೆ. ಪಿ.ಯು.ಸಿ. ಫಲಿತಾಂಶವು ಮೇ ತಿಂಗಳಿನಲ್ಲಿಯೇ ಪ್ರಕಟವಾಗಲಿದ್ದು, ಜೂನ್ ತಿಂಗಳಿನಲ್ಲಿ ಪ್ರವೇಶ ಪ್ರಕ್ರಿಯೆ ನಡೆಸಿ ಆದಷ್ಟು ಶೀಘ್ರ ತರಗತಿಗಳನ್ನು ಆರಂಭಿಸಬೇಕು.



ಕುಲಸಚಿವರು, ಜ್ಞಾನಸಹ್ಯಾದ್ರಿ

Scanned with OKEN Scanner

ವಿಳಂಬವಾದಲ್ಲಿ ವಿದ್ಯಾರ್ಥಿಗಳು ಬೇರೆ ಕೋರ್ಸ್‌ಗಳಿಗೆ ಪ್ರವೇಶ ಪಡೆದು ಸಾಮಾನ್ಯ ಪದವಿಗಳಿಗೆ ವಿದ್ಯಾರ್ಥಿಗಳ ಕೊರತೆಯಾಗುತ್ತದೆ. ಆದುದರಿಂದ, ಹೆಚ್ಚಿನ ವಿಷಯಗಳ ಪರೀಕ್ಷೆಗಳು ಮಾರ್ಚ-17ಕ್ಕೆ ಮುಗಿಯಲಿದ್ದು, ಮಾರ್ಚ್-20 ರಿಂದ ತರಗತಿಗಳನ್ನು ಆರಂಭಿಸಿದಲ್ಲಿ ಉಪಯುಕ್ತವಾಗುತ್ತದೆ. ಒಂದೆರಡು ಕಲಾ ವಿಷಯಗಳ ಪರೀಕ್ಷೆ ವಿಳಂಬದಿಂದ ಉಳಿದ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳಿಗೆ ತೊಂದರೆಯಾಗಬಾರದು ಎಂದರು. ಡಾ.ಸಣ್ಣಹನುಮಪ್ಪರವರು ಮಾತನಾಡಿ, ಪರೀಕ್ಷೆ ಹಾಗೂ ಮೌಲ್ಯಮಾಪನಗಳು ನಡೆಯುತ್ತಿರುತ್ತವೆ. ಕೆಲವು ಅಧ್ಯಾಪಕರನ್ನು ವಿಶ್ವವಿದ್ಯಾಲಯವು ಪರೀಕ್ಷಾ ಕಾರ್ಯಗಳಿಗೆ ಬಳಸಿಕೊಂಡಿರುತ್ತದೆ. ಇದರಿಂದ ಪರೀಕ್ಷೆ ನಡೆಯುತ್ತಿರುವಾಗಲೇ ತರಗತಿಗಳನ್ನು ಆರಂಭಿಸಿದಲ್ಲಿ ಅಧ್ಯಾಪಕರ ಕೊರತೆ ಆಗುತ್ತದೆ ಎಂದರು. ಕುಲಸಚಿವ (ಮೌಲ್ಯಮಾಪನ)ರವರು ಮಾಹಿತಿ ನೀಡುತ್ತಾ, ಕೆಲವು ಕಾಲೇಜುಗಳಲ್ಲಿನ ಸಮಸ್ಯೆಯಿಂದಾಗಿ ಪರೀಕ್ಷಾ ದಿನಾಂಕಗಳನ್ನು ಮುಂದೂಡಬೇಕಾದ ಅನಿವಾರ್ಯತೆ ಉಂಟಾಯಿತು. ಪ್ರಸ್ತುತ ಪರೀಕ್ಷಾ ದಿನಗಳನ್ನು ಕಡಿತಗೊಳಿಸಿ, ಭಾನುವಾರ ಸೇರಿದಂತೆ ರಜಾ ದಿನಗಳಲ್ಲಿಯೂ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ ಎಂದರು.

ಸದಸ್ಯರಾದ ಡಾ.ಅನಂತ, ಎಸ್., ರವರು ಮತ್ತೊಮ್ಮೆ ಮಾತನಾಡಿ, ಮಾರ್ಚ್ ಅಂತ್ಯದೊಳಗಾದರೂ ತರಗತಿಗಳನ್ನು ಆರಂಭಿಸಿದರೆ ಉತ್ತಮ ಎಂದರು. ಉಳಿದ ಸದಸ್ಯರು ಕೂಡ ಧ್ವನಿಗೂಡಿಸಿದರು.

**2024–ಸಿಂ–1.08(ಬಿ):** ಸದಸ್ಯರಾದ ಡಾ.ಅನಂತ, ಎಸ್., ರವರು ಮಾತನಾಡಿ, ವಿಶ್ವವಿದ್ಯಾಲಯದಲ್ಲಿ ಕೆಲವು ವರ್ಷಗಳ ಹಿಂದೆಯೇ 10 ಜನ ಅಧೀಕ್ಷಕರಿಗೆ ಸಹಾಯಕ ಕುಲಸಚಿವ ಹುದ್ದೆಗೆ ಬಡ್ತಿ ನೀಡಿದ್ದು, ಅವರಿಗೆ ಈವರೆಗೂ ವೇತನ ನಿಗದೀಕರಣ ಮಾಡಿಲ್ಲ. ಅಧ್ಯಾಪಕ ಮತ್ತು ಅಧ್ಯಾಪಕೇತರ ನೌಕರ ಇಬ್ಬರೂ ಸರಿಯಾಗಿ ಕಾರ್ಯನಿರ್ವಹಿಸಿದಲ್ಲಿ ಮಾತ್ರ ಶೈಕ್ಷಣಿಕ ಸಂಸ್ಥೆ ಮುನ್ನೆಡೆಯಲು ಸಾಧ್ಯ. ಮುಂಬಡ್ತಿಗಳನ್ನು ಹಿಂಪಡೆದಿರುವ ನೌಕರರಿಗೆ ಕೂಡ ಈವರೆಗೂ ಮಂಜೂರಾದ ಹುದ್ದೆಗಳಿಗೆ ಎದುರಾಗಿ ಬಡ್ತಿ ನೀಡಿಲ್ಲ. ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರಿಗೆ ಮಾತ್ರ ಸಕಾಲದಲ್ಲಿ ಬಡ್ತಿ ಸೌಲಭ್ಯಗಳನ್ನು ನೀಡುತ್ತಿದ್ದು, ಅಧ್ಯಾಪಕೇತರ ನೌಕರರನ್ನು ಪರಿಗಣಿಸುತ್ತಿಲ್ಲ ಎಂದರು. ಶ್ರೀ ಶಶಿಧರ್‌ರವರು ಮಾತನಾಡಿ, ಈ ಬಗ್ಗೆ ಹಿಂದಿನ ಸಿಂಡಿಕೇಟ್ ಸಭೆಗಳಲ್ಲಿ ಚರ್ಚಿಸಿ ನಿರ್ಣಯಿಸಿದರೂ ಆಡಳಿತವು ಕ್ರಮ ಕೈಗೊಳ್ಳುತ್ತಿಲ್ಲ ಎಂದರು.

ಮಾನ್ಯ ಕುಲಪತಿಯವರು ಮಾತನಾಡುತ್ತಾ, ಅಧ್ಯಾಪಕೇತರ ನೌಕರರಿಗೆ ಉನ್ನತೀಕರಣ ಪರಿನಿಯದ ಅನುಮೋದನೆ ಕಾಯ್ದಿರಿಸಿ ನೀಡಲಾಗಿದ್ದ ಬಡ್ತಿಗಳನ್ನು ಹಿಂಪಡೆದಿದ್ದು, ಪ್ರಸ್ತುತ ಮಂಜೂರಾದ ಹುದ್ದೆಗಳನ್ನು ಮಾತ್ರ ಪರಿಗಣಿಸಿ ಬಡ್ತಿ ನೀಡಬೇಕಾಗಿದೆ. ಇದಕ್ಕಾಗಿ ನೌಕರರ ಜೇಷ್ಠತಾ ಪಟ್ಟಿಯನ್ನು ಪರಿಷ್ಕರಿಸಲು ಸಮಿತಿಯನ್ನು ರಚಿಸಲಾಗಿತ್ತು. ಸಮಿತಿಯು ದಿನಾಂಕ: 01-01-2024ಕ್ಕೆ ಅನ್ವಯವಾಗುವಂತೆ ಪ್ರಕಟಿಸಿದ್ದ ಕರಡು ಜೇಷ್ಠತಾ ಪಟ್ಟಿಗೆ ನೌಕರರು ಸಲ್ಲಿಸಿದ್ದ ಆಕ್ಷೇಪಣೆಗಳನ್ನು ದಿನಾಂಕ:27-01-2024 ರಂದು ನಡೆದ ಸಭೆಯಲ್ಲಿ ಪರಿಶೀಲಿಸಿದ್ದು, ಸಮಿತಿಯ ವರದಿ ಬಂದ ನಂತರ ಸದರಿ ವರದಿಯನ್ನು ಪರಿಶೀಲಿಸಿ ಅರ್ಹ ನೌಕರರಿಗೆ ಅರ್ಹತೆ, ಜೇಷ್ಠತೆ ಹಾಗೂ ರೋಸ್ಟರ್ ಆಧರಿಸಿ ಬಡ್ತಿ ನೀಡಲಾಗುವುದು ಎಂದರು. ಶ್ರೀ ಶಶಿಧರ್‌ರವರು ಒಂದು ವಾರದೊಳಗೆ ಬಡ್ತಿ ನೀಡುವಂತೆ ತಿಳಿಸಿದರು.

ಕುಲಸಚಿವರು ಮಾತನಾಡಿ, ಇದು ಸೇವಾ ವಿಷಯವಾಗಿದ್ದು, ಕೂಲಂಕುಷವಾಗಿ ಪರಿಶೀಲಿಸಿ ಖಾಲಿ ಇರುವ ಮಂಜೂರಾದ ಹುದ್ದೆಗಳಿಗೆ ಬಡ್ತಿಗಳನ್ನು ನೀಡಲಾಗುವುದು. ತರಾತುರಿಯಲ್ಲಿ ಮಾಡಿದಲ್ಲಿ ಮತ್ತೆ ಸಮಸ್ಯೆಗಳಾಗುತ್ತವೆ. ಬಡ್ತಿಗಳನ್ನು ನೀಡಿದ ನಂತರ ಮತ್ತೊಮ್ಮೆ ತಾತ್ಕಾಲಿಕ ಪಟ್ಟಿ ಪ್ರಕಟಿಸಲಾಗುವುದು. ಆದಷ್ಟು ಬೇಗನೆ ಬಡ್ತಿ ಹಾಗೂ ವೇತನ ನಿಗದೀಕರಣ ಸಮಸ್ಯೆಯನ್ನು ಬಗೆಹರಿಸಲಾಗುವುದು ಎಂದರು.

**2024–ಸಿಂ–1.08(ಸಿ):** ಸದಸ್ಯರಾದ ಡಾ.ಅನಂತ, ಎಸ್., ರವರು ಮಾತನಾಡಿ, ಸ್ನಾತಕೋತ್ತರ ಕೋರ್ಸ್‌ಗಳಿಗೆ ಕೌನ್ಸಿಲಿಂಗ್ ಮೂಲಕ ಪ್ರವೇಶ ಮುಗಿದ ನಂತರ ವಿಶ್ವವಿದ್ಯಾಲಯ ಮತ್ತು ಕಾಲೇಜುಗಳಲ್ಲಿ ಖಾಲಿ ಉಳಿಯುವ ಸೀಟುಗಳಿಗೆ ಪ್ರವೇಶ ನೀಡಲು ನಿರಾಕರಿಸಲಾಗುತ್ತಿದೆ. ಇದರಿಂದಾಗಿ, ಯಾವುದೋ ಕಾರಣದಿಂದ ಸಕಾಲದಲ್ಲಿ ಅರ್ಜಿ ಸಲ್ಲಿಸಲು ಆಗದ ವಿದ್ಯಾರ್ಥಿಗಳು ಉನ್ನತ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಅಲ್ಲದೆ, ವಿಶ್ವವಿದ್ಯಾಲಯ ಹಾಗೂ ಕಾಲೇಜುಗಳಲ್ಲಿನ ಕೆಲವು ವಿಷಯಗಳಲ್ಲಿ ಪ್ರವೇಶ ಸಂಖ್ಯೆ ಕೂಡ ಕಡಿಮೆಯಾಗಿದೆ. ಆದುದರಿಂದ, ಶೇ.75ರಷ್ಟು ಹಾಜರಾಗಿ ಪೂರೈಸುವ



ಕುಲಸಚಿವರು
ಕು.ವಿ./ ಜ್ಞಾನಸಹ್ಯಾದ್ರಿ

Scanned with OKEN Scanner

ಷರತ್ತಿಗೊಳಪಟ್ಟು ಪ್ರವೇಶ ನೀಡಬಹುದು ಎಂದರು.

ಮಾನ್ಯ ಕುಲಪತಿಯವರು ಮಾತನಾಡಿ, ಈ ವರ್ಷ ತರಗತಿಗಳು ಆರಂಭವಾಗಿ ಈಗಾಗಲೇ ಎರಡೂವರೆ ತಿಂಗಳಾಗಿದೆ. ಆದುದರಿಂದ ಸದಸ್ಯರ ಮನವಿಯನ್ನು ಮುಂದಿನ ವರ್ಷ ಪರಿಗಣಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು.

**2024-ಸಿಂ-1.08(ಡಿ):** ಸದಸ್ಯರಾದ ಡಾ. ಅನಂತ, ಎಸ್.ರವರು ಮಾತನಾಡಿ, ವಿಶ್ವವಿದ್ಯಾಲಯದ ಇಬ್ಬರು ನೌಕರರುಗಳಾದ ಡಾ.ಸುರೇಶ್, ಎಂ., ಹಾಗೂ ಶ್ರೀ ಕರಿಯಪ್ಪ, ಎಂ., ಇವರುಗಳನ್ನು ಸೇವೆಯಿಂದ ಅಮಾನತ್ತು ಮಾಡಿದೆ. ಆದರೆ, ಅವರುಗಳ ವಿರುದ್ಧ ಆರೋಪಗಳು ಇದ್ದಲ್ಲಿ ವಿಚಾರಣಾ ಸಮಿತಿ ರಚಿಸಿ ತನಿಖೆ ನಡೆಸಬಹುದಾಗಿತ್ತು. ಅವರು ತಪ್ಪು ಮಾಡಿರುವುದು ವಿಚಾರಣೆಯಿಂದ ಸಾಬೀತಾಗಿದ್ದರೆ, ಅವರ ವಿರುದ್ಧ ಕ್ರಮ ಕೈಗೊಳ್ಳಬೇಕಾಗಿತ್ತು ಎಂದರು. ಸದಸ್ಯರಾದ ಡಾ.ಸಣ್ಣಹನುಮಪ್ಪರವರು ಮಾತನಾಡಿ ಸದರಿ ನೌಕರರಿಗೆ ಈಗ ಏನೂ ಕೆಲಸ ಇಲ್ಲದೆ ಅರ್ಧ ವೇತನ ನೀಡಲಾಗುತ್ತಿದೆ. ಇದರಿಂದ ಲಕ್ಷಾಂತರ ಹಣ ನಷ್ಟವಾಗುತ್ತಿದೆ ಎಂದರು. ಶ್ರೀ ಶಶಿಧರ ಬಿ.ಎನ್.,ರವರು ಮಾತನಾಡಿ ಅವರ ವಿರುದ್ಧ ಇರುವ ಆರೋಪಗಳ ಕುರಿತು ತನಿಖೆ ನಡೆಸಲು ಒಂದು ಸಮಿತಿಯನ್ನು ರಚಿಸಿ. ಸದರಿ ನೌಕರರು ತನಿಖೆಗೆ ಅಡ್ಡಿ ಪಡಿಸುತ್ತಾರೆ ಎಂಬ ಸಂಶಯವಿದ್ದರೆ, ಅವರನ್ನು ಘಟಕ ಕಾಲೇಜು ಅಥವಾ ಸ್ನಾತಕೋತ್ತರ ಕೇಂದ್ರಕ್ಕೆ ವರ್ಗಾಯಿಸಿ, ತನಿಖೆ ನಡೆಸಿದಲ್ಲಿ ಅವರು ತನಿಖೆಯಲ್ಲಿ ಹಸ್ತಕ್ಷೇಪ ಮಾಡಲು ಆಗುವುದಿಲ್ಲ ಎಂದರು. ಮಾನ್ಯ ಕುಲಪತಿಗಳು ಮಾತನಾಡಿ, ಅವರ ಕರ್ತವ್ಯ ಲೋಪದ ಕುರಿತಾಗಿ ಕಾರಣ ಕೇಳಿ ನೋಟೀಸ್‌ಗಳನ್ನು ಜಾರಿ ಮಾಡಿದೆ. ಅದಕ್ಕೆ ಅವರು ನೀಡಿರುವ ಸಮಜಾಯಿಷಿ ಸಮರ್ಪಕವಾಗಿಲ್ಲ. ಕಾನೂನು ಸಲಹೆ ಪಡೆದುಕೊಂಡು, ನಿಯಮಾನುಸಾರ ಅವರನ್ನು ಅಮಾನತ್ತು ಮಾಡಲಾಗಿದೆ ಎಂದರು.

ಅಂತಿಮವಾಗಿ ಸಭೆಗೆ ಆಗಮಿಸಿ ಸೂಕ್ತ ಸಲಹೆ, ಸಹಕಾರ ನೀಡಿದ ಎಲ್ಲಾ ಸದಸ್ಯರುಗಳಿಗೆ ಕುಲಸಚಿವರು ಹೃತ್ಪೂರ್ವಕವಾಗಿ ವಂದಿಸಿದ ನಂತರ ಸಭೆಯ ಕಲಾಪಗಳು ಮುಕ್ತಾಯವಾದವು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ

ಕುಲಪತಿಗಳು
ಕುಲಪತಿಗಳು
ಕುವೆಂಪು ವಿಶ್ವವಿದ್ಯಾನಿಲಯ
ಶಂಕರಘಟ್ಟ - 577 451,
ಶಿವಮೊಗ್ಗ ಜಿಲ್ಲೆ.